TRC
Since-1913

# ದಿ ತೋಟಗಾರ್ಸ್ ರೂರಲ್ ಕೋ-ಆಪರೇಟಿವ್ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿ ಲಿ., ಶಿರಸಿ (ಉ.ಕ.)

110 ವರ್ಷಗಳಿಂದ ನಿರಂತರ ರೈತರ ಸೇವೆಯಲ್ಲಿ

## 2022-23ನೇ ಆರ್ಥಿಕ ವರ್ಷಾಂತ್ಯದ ಪ್ರಮುಖ ಮುಖ್ಯಾಂಶ್ಯಗಳು

| | |
|---|---|
| ದುಡಿಯುವ ಬಂಡವಾಳ ₹ 113,75,06,238 | ಕಾಯ್ದಿಟ್ಟ ನಿಧಿ ₹ 2,84,83,464 |
| ಸ್ವೀಕರಿಸಿದ ಠೇವಣಿ ₹ 68,25,42,607 | ವಿತರಿಸಿದ ಸಾಲಗಳು ₹ 92,16,99,023 |
| ನಿಕ್ಕೀ ಲಾಭ ₹ 1,19,64,608 | ಅಡಿಟ್ ವರ್ಗೀಕರಣ 'A' Class |
| ಅನುತ್ಪಾದಕ ಸಾಲದ ಪ್ರಮಾಣ 0.005% | ನಿಕ್ಕೀ ಅನುತ್ಪಾದಕ ಸಾಲದ ಪ್ರಮಾಣ 0% |



“ ನನ್ನ ಜನರ ಹಿತವೇ
ನನಗೆ ಮುಖ್ಯ.
ಸಹಕಾರಿ ಸಂಸ್ಥೆಯ ಮೂಲಕ ನಂಬಿದವರ
ಸೇವೆ ಮಾಡುವುದೇ ನನ್ನ ಗುರಿ.
ಇದನ್ನು ಬಿಟ್ಟು ಸ್ವರ್ಗದ ಪದವಿ ಕೊಟ್ಟರೂ
ನನಗೆ ಬೇಡ.

■ ದಿ. ಶ್ರೀಪಾದ ಹೆಗಡೆ
ಕಡವೆ

# 110ನೇ ವಾರ್ಷಿಕ ವರದಿ ಮತ್ತು ಅಢಾವೆ ಪತ್ರಿಕೆ 2022-23

# Co wallet

CO-OPERATIVE WALLET

## ಸುಗಮ ವ್ಯವಹಾರಕ್ಕೆ ಸುಲಭ ಪರಿಹಾರ..

### ವ್ಯಾಲೆಟ್ ಒಂದು - ಉಪಯೋಗ ಹಲವು

- ಸಂಘದಲ್ಲಿರುವ ಖಾತೆಯಿಂದ ಬೇರೆಡೆ ಹಣ ವರ್ಗಾವಣೆ
- ಉಳಿತಾಯ ಖಾತೆ ವ್ಯವಹಾರಗಳ ಮಾಹಿತಿ
- ಸಾಲದ ವಾಯಿದೆ ದಿನಾಂಕ ಹಾಗೂ ಕಂತುಗಳ ವಿವರ
- ಅವಧಿ ಠೇವುಗಳ ಸಂಪೂರ್ಣ ವಿವರ
- ಮಸಹೂಲು ವಿಕ್ರಿ ವಹಿವಾಟಿನ ನಿಖರ ಮಾಹಿತಿ

- 24*7 ನಿರಂತರವಾಗಿ ಯಾವುದೇ ಸ್ಥಳ ಯಾವುದೇ ಸಮಯದಲ್ಲಿ ನಿಮ್ಮ ಖಾತೆ ಮಾಹಿತಿ ನಿಮ್ಮ ಕೈಯಲ್ಲಿ..
- www.trcsirsi.in ನಲ್ಲಿ ಸಹ ಕೋ ವ್ಯಾಲೆಟ್ ಬಳಕೆ ಮಾಡಬಹುದು.
- ಕೋ-ವ್ಯಾಲೆಟ್ ಅಳವಡಿಸಿಕೊಳ್ಳಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಘದ ಕಚೇರಿಗೆ ಭೇಟಿ ನೀಡಿ..



*ಸರಳ-ಸುಗಮ-ಸದಸ್ಯ ಸ್ನೇಹಿ ವ್ಯವಹಾರ ನಮ್ಮ ಧ್ಯೇಯ...*
*ಕೃಷಿಕರ ಸ್ವಾವಲಂಬಿ ಜೀವನ ನಮ್ಮ ಆದ್ಯತೆ...*

## ದಿ ತೋಟಗಾರ್ಸ್ ರೂರಲ್ ಕೋ-ಆಪರೇಟಿವ್ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿ ಲಿ., ಶಿರಸಿ (ಉ.ಕ.)

### ಆಡಳಿತ ಮಂಡಳಿ ಸದಸ್ಯರು

| | | |
|---|---|---|
| 1) | ಶ್ರೀ ರಾಮಕೃಷ್ಣ ಶ್ರೀಪಾದ ಹೆಗಡೆ, ಕಡವೆ. | ಅಧ್ಯಕ್ಷರು |
| 2) | ಶ್ರೀ ಲೋಕೇಶ ಗುರುನಾಥ ಹೆಗಡೆ, ಹುಲೇಮಳಗಿ. | ಉಪಾಧ್ಯಕ್ಷರು |
| 3) | ಶ್ರೀ ಗಜಾನನ ವೆಂಕಟ್ರಮಣ ಜೋಶಿ, ಕಾಗೇರಿ. | ನಿರ್ದೇಶಕರು |
| 4) | ಶ್ರೀ ವಿಶ್ವನಾಥ ಗೋಪಾಲಕೃಷ್ಣ ಹೆಗಡೆ, ಸೋಮ್ನಳ್ಳಿ. | ನಿರ್ದೇಶಕರು |
| 5) | ಶ್ರೀ ವಿಶ್ವಾಸ ಪುಂಡಲೀಕ ಬಲಸೆ, ಚವತ್ತಿ. | ನಿರ್ದೇಶಕರು |
| 6) | ಶ್ರೀ ಗಣಪತಿ ಶೇಷಗಿರಿ ರಾಯ್ಸದ್, ಕಲಸಳ್ಳಿ. | ನಿರ್ದೇಶಕರು |
| 7) | ಶ್ರೀ ಸುಬ್ರಾಯ ನಾರಾಯಣ ಹೆಗಡೆ, ಹಾವಳಮನೆ. | ನಿರ್ದೇಶಕರು |
| 8) | ಶ್ರೀ ಶಿವಾನಂದ ಗಣಪತಿ ಭಟ್, ನಿಡಗೋಡ | ನಿರ್ದೇಶಕರು |
| 9) | ಶ್ರೀ ಈರಾ ನಾರಾಯಣ ಗೌಡ, ಕಳವೆ. | ನಿರ್ದೇಶಕರು |
| 10) | ಶ್ರೀ ಶ್ರೀಧರ ಕೆರಿಯಾ ಮಡಿವಾಳ, ಡೊಂಬೆ | ನಿರ್ದೇಶಕರು |
| 11) | ಶ್ರೀಮತಿ ಕಲ್ಪನಾ ಶಿವಾನಂದ ಕೊಪ್ಪಳ, ಬೇಣದಮನೆ. | ನಿರ್ದೇಶಕರು |
| 12) | ಶ್ರೀಮತಿ ಇಂದಿರಾ ವೆಂಕಟ್ರಮಣ ಹೆಗಡೆ, ಬಾಳೆಕೊಪ್ಪ. | ನಿರ್ದೇಶಕರು |
| 13) | ಶ್ರೀ ವಿಶ್ವನಾಥ ನರಸಿಂಹ ಹೆಗಡೆ, ಮೂಲೇಮನೆ | ವೃತ್ತಿಪರ ನಿರ್ದೇಶಕರು |

### ಸಿಬ್ಬಂದಿವರ್ಗ

ಶ್ರೀ ಕಿರಣ ಎಸ್. ಭಟ್ಟ
ಇನ್ಸ್‌ಪೆಕ್ಟರ್

ಶ್ರೀ ರಮೇಶ ಹೆಗಡೆ, ಬಾಳೆಗದ್ದೆ
ಮುಖ್ಯಕಾರ್ಯನಿರ್ವಾಹಕ

ಹಾಗೂ ಉಳಿದ ಸಿಬ್ಬಂದಿಗಳು

### ಶಾಸನಬದ್ಧ ಲೆಕ್ಕ ಪರಿಶೋಧನೆ

**ಸತೀಶ ಹೆಗಡೆ** & **ಕಂಪನಿ,** ಚಾರ್ಟರ್ಡ್ ಅಕೌಂಟಂಟ್ಸ್, ಶಿರಸಿ

### ಸಲಹೆಗಾರರು

**ಶ್ರೀ ಎಂ.ಆರ್. ಹೆಗಡೆ, ಶಿರಸಿ,**
ನಿವೃತ್ತ ಕಂದಾಯ ಇಲಾಖೆ ಅಧಿಕಾರಿಗಳು.

### ಮಹಸೂಲು ವಿಕ್ರಿ-ವಹಿವಾಟು

1) ದಿ ತೋಟಗಾರ್ಸ್ ಕೋ-ಆಪ್. ಸೇಲ್ ಸೊಸೈಟಿ ಲಿ., ಶಿರಸಿ ಇದರ ಪ್ರಧಾನ ಕಛೇರಿ ಮತ್ತು ಯಲ್ಲಾಪುರ ಶಾಖೆ, ಸಿದ್ದಾಪುರ ಶಾಖೆ.
2) ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ಲಿ., ಶಿರಸಿ (ಉ.ಕ.)

TRC
Since-1913



### ಕಚೇರಿ ಸಂಪರ್ಕ


94492 27386 (ಆಫೀಸ್)
94491 81386 (ವಿಕ್ರಿ ವಿಭಾಗ)

08384-236886, 234461

trcacs@gmail.com

www.trcsirsi.in

ಹೊಸ ಮಾರುಕಟ್ಟೆ ಪ್ರಾಂಗಣ,
ತಾ.ಶಿರಸಿ (ಉ.ಕ.) 581 402


QR ಕೋಡ್ ಸ್ಕ್ಯಾನ್ ಮಾಡಿ
ಅಥವಾ
www.trcsirsi.in ನಲ್ಲಿಯೂ ಸಹ

**ಅಢಾವೆ ಪತ್ರಿಕೆ ವೀಕ್ಷಿಸಿ**

ನೋಂದಣಿ ಸಂ: 673 TRC Since-1913 ಸ್ಥಾಪನೆ: 12–11–1913

# ದಿ ತೋಟಗಾರ್ಸ್ ರೂರಲ್ ಕೋ-ಆಪರೇಟಿವ್ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿ ಲಿ., ಶಿರಸಿ (ಉ.ಕ.)

ವಿಳಾಸ: ಹೊಸ ಮಾರುಕಟ್ಟೆ ಪ್ರಾಂಗಣ, ತಾ.ಶಿರಸಿ, ಜಿ.ಉತ್ತರ ಕನ್ನಡ 581 402

# ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

ಕರ್ನಾಟಕ ಸ.ಸಂ. ಕಾಯಿದೆ 1959ರ ಕಲಂ 29(ಎಫ್)2 ಮತ್ತು ಪ್ರಕರಣ 27(1)ರ ಪ್ರಕಾರ

**ಮಾನ್ಯರೇ,**

ದಿ ತೋಟಗಾರ್ಸ್ ರೂರಲ್ ಕೋ–ಆಪರೇಟಿವ್ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿ ಲಿ., ಶಿರಸಿ(ಉ.ಕ.)ಯ ಸನ್ 2022–23ನೇ ಸಾಲಿನ ಸರ್ವ ಸದಸ್ಯರ 110ನೇ ವಾರ್ಷಿಕ ಸಾಮಾನ್ಯ ಸಭೆಯನ್ನು **ತಾರೀಖು 03–06–2023, ಶನಿವಾರ ಬೆಳಿಗ್ಗೆ 10.00 ಘಂಟೆಗೆ** ಸರಿಯಾಗಿ **ನಮ್ಮ ಸಂಘದ ಸಭಾಭವನದಲ್ಲಿ** ಸಂಘದ ಅಧ್ಯಕ್ಷರಾದ **ಶ್ರೀ ರಾಮಕೃಷ್ಣ ಶ್ರೀಪಾದ ಹೆಗಡೆ, ಕಡವೆ** ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸದಸ್ಯರೆಲ್ಲರೂ ಸಕಾಲಕ್ಕೆ ಈ ಸಭೆಗೆ ಅವಶ್ಯ ಆಗಮಿಸಬೇಕಾಗಿ ಕೋರಿದೆ.

ಆಡಳಿತ ಮಂಡಳ ಆದೇಶದಂತೆ

ಸ್ಥಳ: ಶಿರಸಿ (ಉ.ಕ.)
(ಸಹಿ ಇದೆ)

ದಿನಾಂಕ: 15–05–2023
ಮುಖ್ಯ ಕಾರ್ಯನಿರ್ವಾಹಕ

ಜಾವಕ ಸಂಖ್ಯೆ: 88/2023–24
**ದಿ ಟಿ.ಆರ್.ಸಿ.ಎ.ಸಿ. ಸೊಸೈಟಿ ಲಿ., ಶಿರಸಿ (ಉ.ಕ.)**

## ಸನ್ 2022–23ನೇ ಸಾಲಿನ

# ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು

| ಅ.ನಂ | ವಿಷಯಪಟ್ಟಿ | ಪುಟ ಸಂಖ್ಯೆ |
|---|---|---|
| 1. | ಪ್ರಾರ್ಥನೆ | – |
| 2. | ಸಭಾಧ್ಯಕ್ಷರಿಂದ ಸ್ವಾಗತ ಹಾಗೂ ಪ್ರಾಸ್ತಾವಿಕ ಮಾತು. | – |
| 3. | ದಿ.25–08–2022ರಂದು ಜರುಗಿದ ಸನ್ 2021–22ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಠರಾವುಗಳನ್ನು ಖಾಯಂಗೊಳಿಸುವುದು. | – |
| 4. | ದಿ.31–03–2023ಕ್ಕೆ ಮುಗಿದ ಸನ್ 2022–23ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸುವುದು. [ಅಧಿನಿಯಮ 27(1)ಎ] | 1 ರಿಂದ 6 |
| 5. | ಸನ್ 2022–23ನೇ ಸಾಲಿನ ಸಂಘದ ಲಾಭ–ಹಾನಿ ಪತ್ರಿಕೆ ಹಾಗೂ ಅಢಾವೆ ಪತ್ರಿಕೆಯನ್ನು ಪರಿಶೀಲಿಸಿ ಮಂಜೂರಿ ನೀಡುವುದು. ಮತ್ತು ಆಡಳಿತ ಮಂಡಳಿಯವರು ಶಿಫಾರಸ್ಸು ಮಾಡಿದ ಲಾಭ ವಿಭಾಗಣೆಯನ್ನು ಪರಿಶೀಲಿಸಿ ಮಂಜೂರಿ ಮಾಡುವುದು. [ಅಧಿನಿಯಮ 27(1)ಡಿ] | 4 ಮತ್ತು 8 ರಿಂದ 15 |
| 6. | ಸನ್ 2023–24ನೇ ಸಾಲಿನ ಬಗ್ಗೆ ಆಡಳಿತ ಮಂಡಳಿಯವರು ಶಿಫಾರಸ್ಸು ಮಾಡಿದ ಅಂದಾಜು ಆಯ–ವ್ಯಯ ಪತ್ರಿಕೆ ಪರಿಶೀಲಿಸಿ ಮಂಜೂರಿ ನೀಡುವುದು. [ಅಧಿನಿಯಮ27(1)ಜಿ] | 19ರಿಂದ 20 |
| 6.ಅ | ಸನ್ 2022–23ನೇ ಸಾಲಿನಲ್ಲಿ ಅಂದಾಜು ಪತ್ರಿಕೆಗಿಂತ ಹೆಚ್ಚಿಗೆ ಖರ್ಚಾದ ಬಾಬ್ತುಗಳನ್ನು ಪರಿಶೀಲಿಸಿ ಮಂಜೂರಿ ಕೊಡುವುದು. | 16 |
| 7. | ಸನ್ 2022–23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಅದಕ್ಕೆ ಆಡಳಿತ ಮಂಡಳಿಯವರು ನೀಡಿದ ಅನುಪಾಲನಾ ವರದಿ ಪರಿಶೀಲಿಸುವುದು. [ಅಧಿನಿಯಮ27(1)ಬಿ] | 21 |
| 8. | ಸನ್ 2023–24ನೇ ಸಾಲಿಗೆ ಸಂಘದ ಶಾಸನಬದ್ಧ ಲೆಕ್ಕ ಪರಿಶೋಧನೆಗೆ ಸಂಬಂಧಿಸಿ ಲೆಕ್ಕ ಪರಿಶೋಧಕರನ್ನು ನೇಮಿಸುವುದು. [ಅಧಿನಿಯಮ 27(1)ಎನ್4] | – |
| 8.ಅ | ಆದಾಯ ತೆರಿಗೆ ಕಾಯಿದೆ ಕಲಂ 44 ಎ.ಬಿ. ಅಡಿಯಲ್ಲಿ ಲೆಕ್ಕ ತಪಾಸಣೆ ಮಾಡುವ ಬಗ್ಗೆ ಲೆಕ್ಕ ತಪಾಸಿಗರನ್ನು ನೇಮಿಸುವುದು. | – |
| 9. | ಹೊರಗಿನಿಂದ ಎತ್ತಬಹುದಾದ ಪರಮಾವಧಿ ಸಾಲದ ಮಿತಿಯನ್ನು ನಿರ್ಧರಿಸುವುದು. [ಪೋಟ ನಿಯಮ 6 (ಅ)9] | – |
| 9.ಅ | ಸನ್ 2023–24ನೇ ಸಾಲಿನಲ್ಲಿ ಸಂಘದ ಹೆಚ್ಚುವರಿ ಬಂಡವಾಳವನ್ನು ಗುಂತಾವಣೆ ಮಾಡಲು ಸಂಸ್ಥೆ/ಮಿತಿ ನಿರ್ಧರಿಸುವುದು. [ಅಧಿನಿಯಮ 98(ಇ)ii] | – |
| 10. | ಸನ್ 2024–25ನೇ ಸಾಲಿನ ಬಗ್ಗೆ ಸದಸ್ಯರಿಗೆ ಸಹಕಾರ ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ, ಮಾಧ್ಯಮಿಕ ಸಾಲ, ಅಲ್ಪಾವಧಿ ಕೃಷಿ ಅಭಿವೃದ್ಧಿ ಸಾಲ ವ ಇತರ ಸಾಲಗಳ ಪತ್ತು ಮತ್ತು ಸಾಲಗಳ ಮಿತಿಯನ್ನು ನಿರ್ಧರಿಸುವ, ಸಾಲ ಮಂಜೂರಿ ನೀಡುವ ಬಗ್ಗೆ ಆಡಳಿತ ಮಂಡಳಿಗೆ ಅಧಿಕಾರ ಕೊಡುವುದು. [ಅಧಿನಿಯಮ 98(ಇ)ii] | – |
| 11. | ಸನ್ 2023–24ನೇ ಸಾಲಿಗೆ ಸಂಘದ ಯಾವುದೇ ವಿಶೇಷ ಚಟುವಟಿಕೆ/ಕಾರ್ಯಕ್ರಮಗಳಿದ್ದಲ್ಲಿ ಅದಕ್ಕೆ ಮಂಜೂರಿ ಕೊಡುವುದು. [ಅಧಿನಿಯಮ 27(1)ಎಫ್] | – |
| 12. | ಸದಸ್ಯರ ಪ್ರವೇಶ ಮತ್ತು ಸಮಾಪ್ತಿ ಕುರಿತು ಟಿಪ್ಪಣೆ ಪರಿಶೀಲಿಸುವುದು. [ಅಧಿನಿಯಮ 27(1) ಎನ್] | – |
| 13. | ಸಂಘದ ಸದಸ್ಯರು ಹಾಗೂ ಆಡಳಿತ ಮಂಡಳಿ ಸದಸ್ಯರುಗಳು ಪಡೆದ ಸಂಘದ ಸೇವೆಗಳ ಉಪಯೋಗದ ಅವಲೋಕನ. [ಅಧಿನಿಯಮ 27(1)ಎನ್–1] | – |
| 14. | ನಿರ್ದೇಶಕರಿಗೆ ಹಾಗೂ ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಹಾಗೂ ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ ಸುಸ್ತಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ. [ಅಧಿನಿಯಮ 27(1)ಎನ್–2] | – |
| 15. | ನಿರ್ದೇಶಕರಿಗೆ ನೀಡಲಾದ ಗೌರವ ಧನ ಹಾಗೂ ಭತ್ತೆಗಳ ಪುನರಾವಲೋಕನ. [ಅಧಿನಿಯಮ 27(1)ಎನ್–7] | – |

| | | |
|---|---|---|
| 16. | ಸಂಘದ ಸಮಗ್ರ ಬೈಲಾ ತಿದ್ದುಪಡಿ ಪ್ರಸ್ತಾವನೆ [ಅಧಿನಿಯಮ 27(1)ಎಲ್]<br>ಟಿಪ್ಪಣಿ: ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಬೆಂಗಳೂರು ರವರ ನಿರ್ದೇಶನದಂತೆ ಮಾದರಿ ಉಪವಿಧಿಗಳನ್ನು ಅಳವಡಿಸಿಕೊಳ್ಳುವುದು. (ತಿದ್ದುಪಡಿಯಾಗಬೇಕಿರುವ ಬೈಲಾ ಪ್ರತಿ ಸಂಘದಲ್ಲಿ ಪರಿಶೀಲನೆಗೆ ಲಭ್ಯವಿರುತ್ತದೆ) | |
| 17. | ಸಂಘದ ಆಡಳಿತ ಮಂಡಳಿ ಸದಸ್ಯರ, ಪದಾಧಿಕಾರಿಗಳ ಮತ್ತು ನೌಕರರ ನಡಾವಳಿಕೆ, ನಿಯಮಗಳ ರಚನೆ ಕುರಿತು ಪರಿಶೀಲಿಸುವುದು [ಅಧಿನಿಯಮ 27(1)ಎಮ್] (ಇರುವುದಿಲ್ಲ) | – |
| 18. | ಯಾವುದೇ ನಿರ್ದಿಷ್ಟ ನಿಧಿಯನ್ನು ಸ್ಥಾಪಿಸುವುದಿದ್ದಲ್ಲಿ ಚರ್ಚಿಸುವುದು. [ಅಧಿನಿಯಮ 27(1)ಎಚ್] (ಇರುವುದಿಲ್ಲ) | – |
| 19. | ಇನ್ನಿತರ ಸಹಕಾರ ಸಂಘಗಳಲ್ಲಿ ಸಂಘವು ಸದಸ್ಯತ್ವವನ್ನು ಪಡೆದಿದ್ದರೆ ಮಂಜೂರಿ ನೀಡುವುದು. [ಅಧಿನಿಯಮ27(1)ಐ] (ಇರುವುದಿಲ್ಲ) | – |
| 20. | ಯಾವುದೇ ಸಹಾಯಕ ಸಂಸ್ಥೆಗಳಿದ್ದಲ್ಲಿ ಅವುಗಳ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳನ್ನು ಪರಿಶೀಲಿಸುವುದು. [ಅಧಿನಿಯಮ 27(1)ಜೆ] (ಇರುವುದಿಲ್ಲ.) | – |
| 21. | ಮುಖ್ಯ ಕಾರ್ಯನಿರ್ವಾಹಕರ ಅಥವಾ ಆಡಳಿತ ಮಂಡಳಿಯ ಸದಸ್ಯರ ಸಂಬಂಧಿಗಳು ಯಾರಾದರೂ ಸಂಘದ ನೌಕರರಾಗಿ ಸೇರ್ಪಡೆಯಾದಲ್ಲಿ ಅವರ ಯಾದಿಯ ಪರಿಶೀಲನೆ. [ಅಧಿನಿಯಮ 27(1)ಕೆ] (ಇರುವುದಿಲ್ಲ) | – |
| 22. | ವಿಚಾರಣಾ ವರದಿ ಇದ್ದಲ್ಲಿ ಪರಿಶೀಲಿಸುವುದು. [ಅಧಿನಿಯಮ (27(1)ಸಿ] (ಇರುವುದಿಲ್ಲ) | – |
| 23. | ಯಾವುದೇ ಖೋತಾ ಇದ್ದಲ್ಲಿ ಪರಿಶೀಲನೆ ಮತ್ತು ಆ ಖೋತಾವನ್ನು ಕಡಿಮೆಗೊಳಿಸಲು ಕಾರ್ಯಕ್ರಮ ರೂಪಿಸುವುದು. [ಅಧಿನಿಯಮ 27(1)ಇ] (ಇರುವುದಿಲ್ಲ.) | – |
| 24. | ವಸೂಲಾಗದೆಂದು ಪರಿಗಣಿಸಲಾದ ಸುಸ್ತಿ ಸಾಲಗಳ ಬಗ್ಗೆ ಪುನರಾವಲೋಕನ. [ಅಧಿನಿಯಮ 27(1)ಎನ್–6] (ಇರುವುದಿಲ್ಲ) | – |
| 25. | ಅಧ್ಯಕ್ಷರ ಅನುಮತಿಯಿಂದ ಬರಬಹುದಾದ ಇತರೇ ವಿಷಯಗಳು. | – |

ಆಡಳಿತ ಮಂಡಳಿಯ ನಿರ್ದೇಶನದಂತೆ

ಶಿರಸಿ (ಉ.ಕ.)
**ದಿನಾಂಕ : 15–05–2023**

(ಸಹಿ ಇದೆ)
**ಮುಖ್ಯ ಕಾರ್ಯನಿರ್ವಾಹಕ**
**ದಿ ಟಿ.ಆರ್.ಸಿ.ಎ.ಸಿ. ಸೊಸೈಟಿ ಲಿ., ಶಿರಸಿ (ಉ.ಕ.)**

## ವಿಶೇಷ ಸೂಚನೆ

* **ಜಿಪಿಎ ನೀಡಿ ವ್ಯವಹಾರ ನಡೆಸುತ್ತಿರುವ ಸದಸ್ಯರು ವಾರ್ಷಿಕ ಸರ್ವಸಾಧಾರಣ ಸಭೆಗೆ ತಾವೇ ಖುದ್ದಾಗಿ ಆಗಮಿಸಿ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡತಕ್ಕದ್ದು. ನಿಯಮಾನುಸಾರ ಜಿಪಿಎ ಪಡೆದ ಸದಸ್ಯರಿಗೆ ವಾರ್ಷಿಕ ಸರ್ವಸಾಧಾರಣ ಸಭೆಗೆ ಆಗಮಿಸಲು ಹಾಗೂ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಲು ಅವಕಾಶವಿರುವುದಿಲ್ಲ.**
* ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವರದಿ ವರ್ಷದ ಕುರಿತಾಗಿ ಸಂಘದ ಸರ್ವೇ ಸಾಮಾನ್ಯ ಕಾರ್ಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಶ್ನೆ/ಮಾಹಿತಿ/ವಿವರಗಳನ್ನು ಕೇಳಬಚ್ಚಿಸುವವರು ಹಾಗೂ ಸಂಘದ ಸೇವೆ-ಚಟುವಟಿಕೆಗಳ ಬಗ್ಗೆ ಸಲಹೆ/ಸೂಚನೆ ನೀಡಲು ಬಯಸುವವರು **ದಿನಾಂಕ: 30-05-2023, ಮಂಗಳವಾರ ಸಂಜೆ 5 ಗಂಟೆಯ ಒಳಗಾಗಿ** ಈ ಬಗ್ಗೆ ಲಿಖಿತವಾಗಿ ಮುಖ್ಯ ಕಾರ್ಯನಿರ್ವಾಹಕರಿಗೆ ನೀಡುವುದು.

# ಸನ್ 2022-23ನೇ ಸಾಲಿನ ವಾರ್ಷಿಕ ವರದಿ

**ಆತ್ಮೀಯ ಸದಸ್ಯರೇ,**

ಅಡಿಕೆ ಬೆಳೆಗಾರರ ಆರ್ತನಾದಕ್ಕೆ ಧ್ವನಿಯಾಗಿ, ಕೃಷಿಕರ ಆಶೋತ್ತರಗಳನ್ನು ಈಡೇರಿಸಲು ಪರಸ್ಪರತೆಯ ಭಾವನೆಯಿಂದ ಜನ್ಮತಾಳಿದ ನಮ್ಮ ಸಂಘವು, ಸಹಕಾರ ವ್ಯವಸ್ಥೆಯಲ್ಲಿ ಶತಮಾನಗಳನ್ನು ಪೂರೈಸಿ, ಶತಮಾನೋತ್ತರ ಕಾಲಘಟ್ಟದಲ್ಲಿ ಸದಸ್ಯರಿಗೆ ಸೇವೆ ಸಲ್ಲಿಸುತ್ತಿದೆ. ನಮ್ಮ ಸಂಘದ ಅಭಿವೃದ್ಧಿಯಲ್ಲಿ ಸಂಘದ ಜೊತೆಯಾಗಿ ನಡೆದ ಎಲ್ಲಾ ಸಹೃದಯ ಸದಸ್ಯರು ಹಾಗೂ ಅಷ್ಟೇ ಜವಾಬ್ದಾರಿಯಿಂದ ಸಂಘವನ್ನು ಮುನ್ನಡೆಸಿಕೊಂಡು ಬಂದ ಎಲ್ಲಾ ಹಿರಿಯ ಸಹಕಾರಿಗಳಿಗೆ ಈ ಸಂದರ್ಭದಲ್ಲಿ ಪ್ರಥಮ ವಂದನೆಗಳನ್ನು ಸಲ್ಲಿಸುತ್ತಿದ್ದೇವೆ. ಸಂಘವು ಸಾಗಿಬಂದ ಶತಮಾನಗಳ ಸುದೀರ್ಘ ಅವಧಿಯಲ್ಲಿ ಅನೇಕ ಸ್ಥಿತ್ಯಂತರಗಳನ್ನು ಕಂಡಿದ್ದು, ಇಂದು ಸಹೃದಯ ಸದಸ್ಯರ ಸಹಕಾರದಿಂದ ಸರ್ವಾಂಗೀಣ ಅಭಿವೃದ್ಧಿಯತ್ತ ಸಾಗುತ್ತಿದೆ. ಸಂಘದ ಕಾರ್ಯವ್ಯವಹಾರಗಳು ಬದಲಾಗುತ್ತಿರುವ ಇಂದಿನ ಕಾಲಘಟ್ಟದಲ್ಲಿ ಆಧುನಿಕತೆಯ ಸ್ಪರ್ಷವನ್ನು ಪಡೆದುಕೊಂಡಿದೆ ಹಾಗೂ ಇದು ಅನಿವಾರ್ಯವೂ ಕೂಡಾ ಆಗಿದೆ. ಈ ನಿಟ್ಟಿನಲ್ಲಿ ಆಧುನಿಕ ತಂತ್ರಜ್ಞಾನ, ವ್ಯವಹಾರಿಕ ವಿಧಾನಗಳ ಮೂಲಕ ಸದಸ್ಯರಿಗೆ ಗರಿಷ್ಠ ಸೇವೆಗಳನ್ನು ಸಂಘವು ಒದಗಿಸುತ್ತಿದೆ. ಇಂತಹ ಬದಲಾವಣೆಗೆ ಹೊಂದಿಕೊಂಡು ವ್ಯವಹರಿಸುತ್ತಿರುವ ಗೌರವಾನ್ವಿತ ಸದಸ್ಯರಾದ ತಾವು ಸಂಘದೊಂದಿಗೆ ನೀಡುತ್ತಿರುವ ಸಹಕಾರಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಕೃಷಿಕ ಸದಸ್ಯರಿಗೆ ಸಿಗಬಹುದಾದ ಬಡ್ಡಿ ರಿಯಾಯಿತಿಯ ಕೃಷಿ ಸಾಲಗಳು, ಕಾಲಕಾಲಕ್ಕೆ ಘೋಷಣೆಯಾದ ಸಾಲ ಮನ್ನಾ ಸೌಲಭ್ಯಗಳನ್ನು ಹಾಗೂ ಕೃಷಿಕರ ಬೆಳೆ ವಿಮಾ ಹಾಗೂ ಜೀವ ವಿಮಾ(ಯಶಸ್ವಿನಿ ಹಾಗೂ ರೈತ ರಕ್ಷಾ ಕವಚ) ಸೌಲಭ್ಯಗಳನ್ನು ಸಂಘವು ಒದಗಿಸುತ್ತಾ ಬಂದಿದೆ. ಕೊರೊನಾದಂತಹ ಜಗತ್ತು ಕಂಡ ಆರೋಗ್ಯ ಬಿಕ್ಕಟ್ಟಿನಂತಹ ಸಂದರ್ಭದಲ್ಲಿಯೂ ಸಹ ಸಂಘವು ಆರ್ಥಿಕವಾಗಿ ಸುಸ್ಥಿತಿಯನ್ನು ಕಾಪಾಡಿಕೊಂಡು ಬಂದಿದೆ. ನಮ್ಮ ಸದಸ್ಯರ ವ್ಯವಹಾರಿಕ ಅನುಕೂಲತೆ ದೃಷ್ಟಿಯಿಂದ ಆಧುನಿಕ ಹಾಗೂ ಸ್ಪರ್ಧಾತ್ಮಕ ಕಾರ್ಯವ್ಯವಹಾರಗಳನ್ನು ಸಂಘವು ಕೈಗೊಳ್ಳುತ್ತಾ ಬಂದಿದ್ದು ಸದಸ್ಯರಿಗೆ ತ್ವರಿತ ಹಾಗೂ ಪ್ರಾಮಾಣಿಕ ಸೇವೆಗಳನ್ನು ಒದಗಿಸುತ್ತಿದೆ. ಸಂಪೂರ್ಣ ಗಣಕೀಕರಣಗೊಂಡ ಕಾರ್ಯವ್ಯವಹಾರ, ನೆಟ್ ಬ್ಯಾಂಕಿಂಗ್ ಸೌಲಭ್ಯಗಳು, ಕೋ-ವ್ಯಾಲೆಟ್‌ನಂತಹ ಆಧುನಿಕ ತಾಂತ್ರಿಕತೆಯಿಂದ ತಮ್ಮ ಮೊಬೈಲ್ ಮೂಲಕವೇ ವೈಯಕ್ತಿಕ ಹಾಗೂ ವಿಶ್ವಾಸಪೂರ್ಣ ವ್ಯವಹಾರಿಕ ಮಾಹಿತಿ ಪಡೆದುಕೊಳ್ಳುವ ವ್ಯವಸ್ಥೆ, ಸಂಘದ ಪ್ರೇರಣೆಯಿಮದ ರಚನೆಗೊಂಡ ಎಫ್.ಪಿ.ಓ ಮೂಲಕ ಸದಸ್ಯರಿಗೆ ಸೇವೆ ಇತ್ಯಾದಿ ಅನೇಕ ಕಾರ್ಯವ್ಯವಹಾರಗಳನ್ನು ಸದಸ್ಯರ ಹಿತದೃಷ್ಟಿಯಿಂದ ನಡೆಸುತ್ತಾ ಬಂದಿದೆ.

ಬದಲಾಗುತ್ತಿರುವ ಕಾಲಘಟ್ಟದಲ್ಲಿ ಮುಂಬರುವ ದಿನಗಳಲ್ಲಿ ಸದಸ್ಯರಿಗೆ ಅನುಕೂಲವಾಗಬಲ್ಲ ಹಲವಾರು ಕಾರ್ಯಯೋಜನೆಗಳನ್ನು ಸಂಘವು ಕೈಗೊಳ್ಳಲು ಸದಾ ಕಟಿಬದ್ಧವಾಗಿದೆ. ಈ ನಿಟ್ಟಿನಲ್ಲಿ ಗೌರವಾನ್ವಿತ ಸದಸ್ಯರಾದ ತಮ್ಮ ಸಹಾಯ ಹಾಗೂ ಸಹಕಾರಗಳು ನಮ್ಮ ಜೊತೆ ಇರಲಿದೆ ಎನ್ನುವುದು ನಮ್ಮ ವಿಶ್ವಾಸವಾಗಿದೆ. ಸಂಘವು ಶತಮಾನವನ್ನು ಸಹಕಾರ ವ್ಯವಸ್ಥೆಯಲ್ಲಿ ಪೂರೈಸಿ ಇದೀಗ ಶತಮಾನೊತ್ತರ 11(111)ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದೆ. ಪ್ರಸ್ತುತ ನಮ್ಮ ಸಂಘದ 110ನೇ ವಾರ್ಷಿಕ ವರದಿ ಹಾಗೂ ಸನ್ 2022-23 ನೇ ಸಾಲಿನ ಅಢಾವೆ ಪತ್ರಿಕೆ ಮತ್ತು ಕಾರ್ಯಚಟುವಟಿಕೆಗಳ ವಿಸ್ತೃತವಾದ ವರದಿಗಳನ್ನು ತಮ್ಮ ಮುಂದೆ ಈ ಕೆಳಗಿನಂತೆ ಸಾದರಪಡಿಸಿದೆ.



**1. ಸಂಘದಲ್ಲಿ ಶೇರು ಸದಸ್ಯತ್ವ :**

ಸಂಘದ ಶೇರು ಸದಸ್ಯತ್ವ ಬೇಕೆಂದು ಅರ್ಜಿ ಸಲ್ಲಿಸುವ ಅರ್ಹ ವ್ಯಕ್ತಿಗಳಿಗೆ ಶೇರು ಸದಸ್ಯತ್ವವನ್ನು ನೀಡಲಾಗುತ್ತಿದೆ.

ವರದಿ ವರ್ಷಾರಂಭದಲ್ಲಿ 3363 ಶೇರು ಸದಸ್ಯರಿದ್ದು, ಪ್ರಸಕ್ತ ಸಾಲಿನಲ್ಲಿ 135 ವ್ಯಕ್ತಿಗಳು ಶೇರು ಸದಸ್ಯರಾಗಿ ಸೇರ್ಪಡೆಯಾಗಿರುತ್ತಾರೆ. ಅದರಂತೆ 412 ವ್ಯಕ್ತಿಗಳ ಶೇರು ಸದಸ್ಯತ್ವ ಕಡಿಮೆ ಆಗಿದ್ದು, ವರದಿ ವರ್ಷಾಂತ್ಯಕ್ಕೆ 3086 ಶೇರು ಸದಸ್ಯರು ಸಂಘದಲ್ಲಿರುತ್ತಾರೆ. ಹಾಗೂ ವರದಿ ವರ್ಷಾರಂಭದಲ್ಲಿ ಸಂಘದಲ್ಲಿ 500 ಸಹಸದಸ್ಯರು ಇದ್ದು, ಪ್ರಸಕ್ತ ಸಾಲಿನಲ್ಲಿ 2 ಸಹ ಸದಸ್ಯರು ಸೇರ್ಪಡೆಗೊಂಡಿರುತ್ತಾರೆ. ವಿವಿಧ ಕಾರಣಗಳಿಗಾಗಿ 9 ಸಹಸದಸ್ಯರ ಸದಸ್ಯತ್ವ ಕಡಿಮೆ ಆಗಿದ್ದು, ವರ್ಷಾಂತ್ಯಕ್ಕೆ 493 ಸಹಸದಸ್ಯರು ಸಂಘದಲ್ಲಿರುತ್ತಾರೆ. ಅಂತೆಯೇ 303 ವ್ಯಕ್ತಿಗಳು ವರದಿ ವರ್ಷದಲ್ಲಿ ನಾಮಮಾತ್ರ ಸದಸ್ಯತ್ವ ಪಡೆದಿರುತ್ತಾರೆ.



**2. ಸದಸ್ಯರ ಶೇರು :**

ಸದಸ್ಯರಿಂದ ಸಂಘವು ಅಂತೂ ಸಂಗ್ರಹಿಸಬಹುದಾದ ಅಧಿಕೃತ ಶೇರು ಬಂಡವಾಳದ ಮಿತಿ ರೂ.10,00,00,000.00 ಇರುತ್ತದೆ. ವರದಿ ವರ್ಷದ ಆರಂಭದಲ್ಲಿ ರೂ.7,70,40,200.00 ಶೇರು ರಖಮು ಇದ್ದು, ಪ್ರಸಕ್ತ ಸಾಲಿನಲ್ಲಿ ರೂ.151,47,600.00 ಜಮಾ ಬಂದಿದ್ದು, ರೂ.31,03,300.00ರಖಮು ಪರತ್ ಆಗಿದೆ. ಕಾರಣ 31-03-2023ಕ್ಕೆ ರೂ. 8,94,09,500.00 ಶೇರು ರಖಮು ಜಮಾ ಇರುತ್ತದೆ. ವರದಿ ಸಾಲಿನಲ್ಲಿ ಸದಸ್ಯರ ಶೇರು ಶೇ.16.05ರ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಕೃಷಿ ಸಾಲಕ್ಕೆ ಸಂಬಂಧಿಸಿ ರೈತರು ಸಾಲ ಪಡೆಯುವಾಗ ನಿಯಮ ರೀತ್ಯಾ ಸಾಲದ ಶೇ.10ರಷ್ಟು ರಖಮನ್ನು ಸಂಘದಲ್ಲಿ ಶೇರು ರೂಪದಲ್ಲಿ ತೊಡಗಿಸಬೇಕಾಗಿರುತ್ತದೆ. ಅದರಂತೆ ಸಂಘವೂ ಸಹ ತಾನು ಪಡೆಯುವ ಕೃಷಿ ಸಾಲಕ್ಕೆ ಅನುಗುಣವಾಗಿ ಶೇ. 5ರಂತೆ ಶೇರು ರಖಮನ್ನು ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಿಂದ ಖರೀದಿಸಬೇಕಾಗಿರುತ್ತದೆ. ಕಾರಣ ಸಾಲ ಪಡೆಯುವ ಸದಸ್ಯರು ತಮ್ಮ ಸಾಲಕ್ಕೆ ಅನುಗುಣವಾಗಿ ಸಂಘದ ಶೇರಿನಲ್ಲಿ ಹಣ ತೊಡಗಿಸಿ ವ್ಯವಹರಿಸುವುದರ ಮೂಲಕ ಸಹಕಾರ ನೀಡಬೇಕಾಗಿ ವಿನಂತಿ.

**3. ನಿಧಿಗಳು :**



ಸಂಘವು ವರ್ಷದಿಂದ ವರ್ಷಕ್ಕೆ ನಿಧಿಗಳ ಶೇಖರಣೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸುತ್ತಿದ್ದು, ವರದಿ ವರ್ಷದ ಆರಂಭದಲ್ಲಿ ಅಂತೂ ನಿಧಿಗಳು ರೂ.11,87,12,916.77 ಜಮಾ ಇರುತ್ತಿದ್ದು ವರದಿ ಸಾಲಿನಲ್ಲಿ ರೂ. 1,00,33,496.34ರಖಮು ನಿಧಿಗಳ ಬಾಬ್ತಿಗೆ ನಿವ್ವಳ ಶೇಖರಣೆ ಆಗಿರುತ್ತದೆ. ಈ ಪೈಕಿ ಮುಖ್ಯವಾಗಿ ಕಾಯ್ದಿಟ್ಟ ನಿಧಿಗೆ ರೂ.21,55,308.34 ಜಮಾ ಆಗಿರುತ್ತದೆ. ಹಾಗೂ ಕಟ್ಟಡ ನಿಧಿಗೆ ರೂ. 18,61,128.00 ಜಮಾ ಬಂದಿದ್ದು ಕಾಯ್ದಿಟ್ಟ ನಿಧಿ ಠೇವನ್ನು ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಲ್ಲಿ ಗುಂತಾಯಿಸಲಾಗಿದೆ. ಕೃಷಿ ಪತ್ತಿನ ಸ್ಥಿರೀಕರಣ ನಿಧಿ ರಖಂಅನ್ನು ಅವಧಿ ಠೇವಿನಲ್ಲಿ ಗುಂತಾಯಿಸಲಾಗಿದೆ. ಅಂತೂ ನಿಧಿಗಳು ವರ್ಷಾಂತ್ಯಕ್ಕೆ ರೂ. 12,79,02,902.11 ಇರುತ್ತದೆ. ವರದಿ ವರ್ಷದಲ್ಲಿ ಶೇ.7.74ರ ಪ್ರಮಾಣದಲ್ಲಿ ನಿಧಿಗಳ ಶೇಖರಣೆಯಲ್ಲಿ ಏರಿಕೆ ಆಗಿದೆ.

**4. ಬ್ಯಾಂಕಿನಿಂದ ಪಡೆದ ಸಾಲ :**

ಸದಸ್ಯರಿಗೆ ಬಡ್ಡಿ ರಿಯಾಯಿತಿಗೊಳಪಡುವ ಕೆಸಿಸಿ ಮತ್ತು ಮಧ್ಯಮಾವಧಿ



ಕೃಷಿ ಸಾಲಗಳನ್ನು ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಿಂದ ಕ್ರಮಿಕ ಪತ್ತು ಮಂಜೂರಿ ಮತ್ತು ಸಾಲ ಮಂಜೂರಿ ಪಡೆದು ನೀಡಲಾಗುತ್ತಿದೆ. ವರದಿ ಸಾಲಿನಲ್ಲಿ ರೂ.30,62,17,044.00 ಕೆಸಿಸಿ ಸಾಲ ಪಡೆಯಲಾಗಿದೆ. ಮತ್ತು ಹಿಂದಿನ ಸಾಲಿನಲ್ಲಿ ಪಡೆದ ಸಾಲವನ್ನು ಅವಧಿಯೊಳಗೆ ಮರುಪಾವತಿಸಲಾಗಿದೆ. ವರದಿ ವರ್ಷಾಂತ್ಯಕ್ಕೆ ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಿಂದ ಪಡೆದ ಅಲ್ಪಾವಧಿ ಕೃಷಿ ಸಾಲ ರೂ.20,00,00,000.00 ಇರುತ್ತದೆ.

**5. ಸದಸ್ಯರ ಸಾಲಗಳು :**



ಸದಸ್ಯರುಗಳಿಗೆ ಕೃಷಿ ಮತ್ತು ಕೃಷಿ ಪೂರಕ ಉದ್ದೇಶಗಳಿಗೆ ವಿವಿಧ ಸಾಲಗಳನ್ನು ಸಂಘದಿಂದ ನೀಡಲಾಗುತ್ತಿದೆ. ವರದಿ ವರ್ಷದ ಪ್ರಾರಂಭದಲ್ಲಿ ಸದಸ್ಯರಿಗೆ ನೀಡಿದ ಅಂತೂ ಸಾಲ ರೂ. 76,83,99,313.00 ಇದ್ದು ವರ್ಷಾಂತ್ಯಕ್ಕೆ ರೂ.92,16,99,023.00 ಆಗಿದೆ. ಅಂದರೆ ವರದಿ ಸಾಲಿನ ಅಂತ್ಯಕ್ಕೆ ಸದಸ್ಯರಿಗೆ ನೀಡಿದ ಸಾಲದಲ್ಲಿ ರೂ.15,32,99,710.00 ಹೆಚ್ಚಳವಾಗಿದೆ. ಸದಸ್ಯರ ಸಾಲ ಕಳೆದ ಸಾಲಿಗಿಂತ ಶೇ.19.95 ರಷ್ಟು ಏರಿಕೆಯಾಗಿದೆ. ಸಂಘವು ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ (ಬೆಳೆಸಾಲ)ವನ್ನು ಸದಸ್ಯರಿಗೆ ಸಕಾಲಿಕವಾಗಿ ಒದಗಿಸುತ್ತಿದೆ. ಕಳೆದ ಸಾಲಿನಲ್ಲಿ ಅಂದರೆ ಸನ್ 2021–22ನೇ ಹಣಕಾಸು ವರ್ಷದಲ್ಲಿ 2447 ವ್ಯಕ್ತಿಗಳಿಗೆ ರೂ. 33,13,01,695.00 ಮೊತ್ತದ ಸಾಲವನ್ನು ನೀಡಿದ್ದು ವರದಿ ವರ್ಷದಲ್ಲಿ 2447 ವ್ಯಕ್ತಿಗಳಿಂದ ರೂ.33,13,01,695.00 ರಖಮು ವಸೂಲಿ ಆಗಿದ್ದು ಅರ್ಥಾತ್ ಶೇ.100 ಪ್ರಮಾಣದಲ್ಲಿ ಸಾಲ ವಸೂಲಿಯಾಗಿದೆ. ವರದಿ ಸಾಲಿನಲ್ಲಿ 2457 ವ್ಯಕ್ತಿಗಳಿಗೆ ರೂ. 34,23,46,109.00 ರಖಮು ಬೆಳೆಸಾಲ ನೀಡಲಾಗಿದೆ. ಕೇಂದ್ರ, ರಾಜ್ಯ ಸರಕಾರಗಳು ರೈತರಿಗೆ ಅನುಕೂಲವಾಗಲೆಂದು, ಕೃಷಿ ಸಾಲಗಳಿಗೆ ಬಡ್ಡಿ ರಿಯಾಯಿತಿ ನೀಡುತ್ತಿದ್ದು, ಅದನ್ನು ಸಂಘವು ಜಿಲ್ಲಾ ಮಧ್ಯವರ್ತಿ ಬ್ಯಾಂಕಿನ ಸಹಯೋಗ, ಸಹಕಾರದೊಂದಿಗೆ ಅನುಷ್ಠಾನಗೊಳಿಸುತ್ತಿದೆ.

**6. ಸದಸ್ಯರ ಠೇವುಗಳು:**



ವರದಿ ವರ್ಷದ ಆರಂಭದಲ್ಲಿ ಸದಸ್ಯರ ಅಂತೂ ಠೇವುಗಳು ರೂ.58,83,30,442.49 ಜಮಾ ಇರುತ್ತದೆ. ಸಂಘದಲ್ಲಿ ನಿಶ್ಚಿತ ಅವಧಿಯ ಠೇವುಗಳು, ಸಂಚಿತ ಠೇವು ಹಾಗೂ ಉಳಿತಾಯ ಖಾತೆ ಠೇವು ಹೀಗೆ ವಿವಿಧ ಬಗೆಯ ಠೇವುಗಳನ್ನು ಆಕರ್ಷಕ ಬಡ್ಡಿದರದಲ್ಲಿ ಸ್ವೀಕರಿಸಲಾಗುತ್ತಿದೆ. ದಿ:31–03–2023ಕ್ಕೆ ಇದ್ದಂತೆ ಅಂತೂ ಠೇವಣಿಗಳು ರೂ.68,25,42,607.42 ಇರುತ್ತಿದ್ದು, ವರದಿ ಸಾಲಿನಲ್ಲಿ ರೂ. 9,42,12,164.93 ಹೆಚ್ಚಳವಾಗಿದ್ದು ಅರ್ಥಾತ್ ಶೇ.16.01ರ ಪ್ರಮಾಣದಲ್ಲಿ ಅಂತೂ ಠೇವುಗಳ ಮೊತ್ತ ಏರಿಕೆಯಾಗಿರುವುದು ಸಂಘದ ಮೇಲೆ ಸದಸ್ಯರಿಗಿರುವ ನಂಬಿಕೆ–ವಿಶ್ವಾಸಕ್ಕೆ ಉತ್ತಮ ನಿದರ್ಶನವಾಗಿದೆ.

**ಸಾಲದ ವ್ಯವಹಾರದ ಸಂಕ್ಷಿಪ್ತ ಮಾಹಿತಿ** (ರಖಮು ರೂ.ಗಳಲ್ಲಿ)

| ಅ. ನಂ. | ಸಾಲದ ವಿವರ | ವರ್ಷಾರಂಭದಲ್ಲಿ ಬಾಕಿ ಇದ್ದ ಅಂತೂ ಸಾಲ (01–04–2022ಕ್ಕೆ) | ಈ ವರ್ಷದಲ್ಲಿ ಪೂರೈಸಿದ ಸಾಲ | ಈ ವರ್ಷದಲ್ಲಿ ಮರುಪಾವತಿ ಆದ ಸಾಲ | ವರ್ಷಾಂತ್ಯಕ್ಕೆ ಬಾಕಿ ಇರುವ ಆಯಾ ಸಾಲ (31–03–2023ಕ್ಕೆ) |
|---|---|---|---|---|---|
| 1 | ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ(ಚಿ/ಹಿ) | 29,02,73,628 | 30,83,68,361 | 29,27,79,829 | 30,58,62,160 |
| 2 | ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ(ಸಾ./ಹಿ.) | 3,58,38,011 | 3,21,03,248 | 3,60,20,011 | 3,19,21,248 |
| 3 | ಹೈನುಗಾರಿಕೆ ಕಿಸಾನ್ ಕ್ರೆಡಿಟ್ ಸಾಲ | 18,79,800 | 17,94,500 | 18,79,800 | 17,94,500 |
| 4 | ಕೋಳಿ ಸಾಕಾಣಿಕೆ ಕಿಸಾನ್ ಕ್ರೆಡಿಟ್ ಸಾಲ | 85,000 | 80,000 | 85,000 | 80,000 |
| 5 | ಕೃಷಿ ಮಾಧ್ಯಮಿಕ ಸಾಲ (ಚಿ.ಹಿ) | 17,69,36,774 | 8,52,78,300 | 4,58,30,199 | 21,63,84,880 |
| 6 | ಕೃಷಿ ಮಾಧ್ಯಮಿಕ ಸಾಲ (ಸಾ.ಹಿ) | 2,79,56,602 | 1,02,36,200 | 62,26,302 | 3,19,66,500 |
| 7 | ಕೃಷಿಯೇತರ ಮಾಧ್ಯಮಿಕ ಸಾಲ (ಚಿ.ಹಿ) | 4,33,51,657 | 4,15,40,000 | 1,64,60,974 | 6,84,30,683 |
| 8 | ಕೃಷಿಯೇತರ ಮಾಧ್ಯಮಿಕ ಸಾಲ (ಸಾ.ಹಿ) | 16,16,500 | 7,00,000 | 13,22,750 | 9,93,750 |
| 9 | ಅಲ್ಪಾವಧಿ ಕೃಷಿ ಅಭಿವೃದ್ಧಿ ಸಾಲ | 14,32,92,026 | 35,97,12,507 | 30,08,02,544 | 20,22,01,989 |
| 10 | ವಾಹನ ಮತ್ತು ಗೃಹಬಳಕೆ ಸಾಲ | 2,43,65,275 | 1,64,08,700 | 1,58,98,692 | 2,48,75,283 |
| 11 | ಬಂಗಾರ ದಾಗಿನೆ ಸಾಲ | 98,25,100 | 88,16,700 | 92,02,187 | 94,39,613 |
| 12 | ಮಾಲವತ್ತಿ ಸಾಲ | 40,77,200 | 3,57,03,710 | 3,50,04,810 | 47,76,100 |
| 13 | ಮುದ್ದತಿ ಠೇವು ಸಾಲ | 24,77,100 | 1,14,16,900 | 1,00,72,500 | 38,21,500 |
| 14 | ಭಾಗ್ಯಲಕ್ಷ್ಮಿ ಠೇವು ಸಾಲ | 39,13,290 | 1,35,36,170 | 1,06,95,693 | 67,53,767 |
| 15 | ಸಿಬ್ಬಂದಿ ಸಂಸಾರ ಗರಜಿನ ಸಾಲ | 23,31,250 | 7,36,250 | 6,00,750 | 24,66,750 |
| 16 | ವೃತ್ತಿಪರ ಉನ್ನತ ಶಿಕ್ಷಣ ಸಾಲ | 1,80,100 | 97,60,450 | 10,250 | 99,30,300 |
| | **ಅಂತೂ** | **76,83,99,313** | **93,61,91,996** | **78,28,92,286** | **92,16,99,023** |

**7. ದುಡಿಯುವ ಬಂಡವಾಳ :**

ಸಂಘದ ವ್ಯವಹಾರ ವರ್ಷದಿಂದ ವರ್ಷಕ್ಕೆ ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿರುವುದು ತಮಗೆಲ್ಲ ತಿಳಿದಿರುವ ವಿಷಯವಾಗಿದೆ. ಶೇರು ಬಂಡವಾಳ ಸ್ವೀಕಾರ, ನಿಧಿಗಳ ಶೇಖರಣೆ, ಸದಸ್ಯರಿಂದ ಠೇವು ಸಂಗ್ರಹಣೆ ಹೀಗೆ ಎಲ್ಲಾ ವಿಭಾಗಗಳಲ್ಲೂ ಪ್ರಗತಿಯನ್ನು ದಾಖಲಿಸುತ್ತಿದೆ. ವರದಿ ವರ್ಷದಲ್ಲಿ ದುಡಿಯುವ ಬಂಡವಾಳದಲ್ಲಿಯೂ ಸಹ ಹೆಚ್ಚಳವಾಗಿದ್ದು ದಿ: 31–03–2023 ಕ್ಕೆ ರೂ. 113,75,06,238.00 ಇರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ದುಡಿಯುವ ಭಂಡವಾಳವು ಶೇ.6.15ರ ಪ್ರಮಾಣದಲ್ಲಿ ಏರಿಕೆಯಾಗಿದೆ.

**8. ಸಾಲ ವಸೂಲಿ ಮತ್ತು ಸುಸ್ತಿ ಸಾಲ ಬಾಕಿ :**

ಅತಿವೃಷ್ಟಿಯಂತಹ ಪರಿಸ್ಥಿತಿಯಲ್ಲಿಯೂ ಸಹ ಪಡೆದ ಸಾಲವನ್ನು ಸಕಾಲಿಕವಾಗಿ ಮರುಪಾವತಿಸುವ ಬಗ್ಗೆ ಮಾನ್ಯ ಸದಸ್ಯರು ಹೆಚ್ಚಿನ ಮುತುವರ್ಜಿ ವಹಿಸುತ್ತಿರುವುದು ಅಭಿನಂದನಾರ್ಹವಾಗಿದೆ. ಕೃಷಿ ಸಾಲಗಳಿಗೆ ಸರಕಾರವು ವಿವಿಧ ಸವಲತ್ತು–ಸೌಲಭ್ಯಗಳನ್ನು ಸಾಲ ಪಡೆದ ಆಧಾರದಲ್ಲಿ ನೀಡದೇ ನಿಗದಿತ ವಾಯಿದೆ ದಿನಾಂಕದೊಳಗೆ ಮರುಪಾವತಿಸಿದ್ದನ್ನು ಆಧರಿಸಿ ನೀಡುತ್ತಿದೆ. ಹೀಗಾಗಿ ಸಕಾಲಿಕವಾಗಿ ಸಾಲ ತೀರುವಳಿ ಮಾಡುವ ಸದಸ್ಯರಿಗೆ ಮಾತ್ರ ಬಡ್ಡಿ ರಿಯಾಯಿತಿಯ ಯೋಜನೆಯ ಲಾಭ ಲಭ್ಯವಾಗುವುದರಿಂದ ಸದಸ್ಯರಲ್ಲಿ ಉಂಟಾಗಿರುವ ಈ ಜಾಗೃತಿ, ಸಂಘ ಹಾಗೂ ಸದಸ್ಯರ ಇಬ್ಬರ ಹಿತದೃಷ್ಟಿಯಿಂದಲೂ ಒಳ್ಳೆಯ ಬೆಳವಣಿಗೆ. ವರದಿ ಸಾಲಿನ ಅಂತ್ಯಕ್ಕೆ ಸುಸ್ತಿ ಸಾಲ ಇರುವುದಿಲ್ಲ. ಅಂತೂ ಸಾಲ ರೂ.92,16,99,023.00 ಇದ್ದು ಸಾಲ ವಸೂಲಿ ಪ್ರಮಾಣ ಶೇ.100 ರಷ್ಟು ಪ್ರಗತಿ ಸಾಧಿಸಿರುತ್ತದೆ. ಸತತ ಆರು ವರ್ಷಗಳಿಂದ ಸಾಲ ವಸೂಲಿಯಲ್ಲಿ ಶೇ.100 ಪ್ರಗತಿ ಸಾಧಿಸಲು ಕಾರಣರಾದ ಮಾನ್ಯ ಸದಸ್ಯರಿಗೆ ಅಭಿನಂದನೆಗಳು. ವರದಿ ಸಾಲಿನಲ್ಲಿ ಸದಸ್ಯರ ಸಾಲದ ಬೇಡಿಕೆ, ಮರುಪಾವತಿ, ಕಟ್ಟುಬಾಕಿ ಹಾಗೂ ಶೇಕಡಾವಾರು ವಸೂಲಿ ಮಾಹಿತಿಗಳ ವಿವರ ಈ ಕೆಳಗಿನಂತಿದೆ.

**ಸಾಲ ಬೇಡಿಕೆ /ವಸೂಲಿ (ದಿನಾಂಕ 01-04-2022 ರಿಂದ 31-03-2023ರ ವರೆಗೆ) (ರಖಮು ರೂ.ಗಳಲ್ಲಿ)**

| ಅ. ನಂ. | ಸಾಲಗಳ ವಿವರ | ಅಂತೂ ತಗಾದೆ | ತಗಾದೆ ಪೈಕಿ ಮರುಪಾವತಿ | ಮರುಪಾವತಿ ಆಗದಿರುವ ಸಾಲ (ಕಟ್ಟುಬಾಕಿ) | ವಸೂಲಿ ಪ್ರಮಾಣ(%) | ಕಟ್ಟುಬಾಕಿ ಪ್ರಮಾಣ(%) |
|---|---|---|---|---|---|---|
| 1 | ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ(ಬೆ/ಹಿ) | 29,27,79,829 | 29,27,79,829 | 0.00 | **100** | 0.00 |
| 2 | ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ(ಸಾ./ಹಿ.) | 3,60,20,011 | 3,60,20,011 | 0.00 | **100** | 0.00 |
| 3 | ಹೈನುಗಾರಿಕೆ ಕಿಸಾನ್ ಕ್ರೆಡಿಟ್ ಸಾಲ | 18,79,800 | 18,79,800 | 0.00 | **100** | 0.00 |
| 4 | ಕೋಳಿ ಸಾಕಾಣಿಕೆ ಕಿಸಾನ್ ಕ್ರೆಡಿಟ್ ಸಾಲ | 85,000 | 85,000 | 0.00 | **100** | 0.00 |
| 5 | ಕೃಷಿ ಮಾಧ್ಯಮಿಕ ಸಾಲ (ಬೆ.ಹಿ) | 4,58,30,199 | 4,58,30,199 | 0.00 | **100** | 0.00 |
| 6 | ಕೃಷಿ ಮಾಧ್ಯಮಿಕ ಸಾಲ (ಸಾ.ಹಿ) | 62,26,302 | 62,26,302 | 0.00 | **100** | 0.00 |
| 7 | ಕೃಷಿಯೇತರ ಮಾಧ್ಯಮಿಕ ಸಾಲ (ಬೆ.ಹಿ) | 1,64,60,974 | 1,64,60,974 | 0.00 | **100** | 0.00 |
| 8 | ಕೃಷಿಯೇತರ ಮಾಧ್ಯಮಿಕ ಸಾಲ (ಸಾ/ಹಿ) | 13,22,750 | 13,22,750 | 0.00 | **100** | 0.00 |
| 9 | ಅಲ್ಪಾವಧಿ ಕೃಷಿ ಅಭಿವೃದ್ಧಿ ಸಾಲ | 30,08,02,544 | 30,08,02,544 | 0.00 | **100** | 0.00 |
| 10 | ವಾಹನ ಮತ್ತು ಗೃಹಬಳಕೆ ಸಾಲ | 1,58,98,692 | 1,58,98,692 | 0.00 | **100** | 0.00 |
| 11 | ಬಂಗಾರ ದಾಗಿನೆ ಸಾಲ | 92,02,187 | 92,02,187 | 0.00 | **100** | 0.00 |
| 12 | ಮಾಲವತ್ತಿ ಸಾಲ | 3,50,04,810 | 3,50,04,810 | 0.00 | **100** | 0.00 |
| 13 | ಮುದ್ದತಿ ಠೇವು ಸಾಲ | 1,00,72,500 | 1,00,72,500 | 0.00 | **100** | 0.00 |
| 14 | ಭಾಗ್ಯಲಕ್ಷ್ಮಿ ಠೇವು ಸಾಲ | 1,06,95,693 | 1,06,95,693 | 0.00 | **100** | 0.00 |
| 15 | ಸಿಬ್ಬಂದಿ ಸಂಸಾರ ಗರಜಿನ ಸಾಲ | 6,00,750 | 6,00,750 | 0.00 | **100** | 0.00 |
| 16 | ವೃತ್ತಿಪರ ಉನ್ನತ ಶಿಕ್ಷಣ ಸಾಲ | 10,250 | 10,250 | 0.00 | **100** | 0.00 |
| | **ಅಂತೂ** | **78,28,92,286** | **78,28,92,286** | **0.00** | **100** | **0.00** |

**9. ಹೂಡಿಕೆ :**



ಸಂಘವು ವಿವಿಧ ಸಹಕಾರಿ ಬ್ಯಾಂಕ್/ಸಂಘಗಳ ಶೇರಿನಲ್ಲಿ ಮತ್ತು ನಿಶ್ಚಿತ ಅವಧಿಯ ಠೇವಣಿಗಳಲ್ಲಿ ಹಣವನ್ನು ಹೂಡಿಕೆ ಮಾಡಿದೆ. ಅವುಗಳ ಕ್ರೋಢೀಕೃತ ಮಾಹಿತಿಯ ಸಂಕ್ಷಿಪ್ತ ವರದಿ ವರ್ಷಾಂತ್ಯಕ್ಕೆ ಇದ್ದಂತೆ ಈ ಕೆಳಗಿನಂತಿದೆ.

(ಅ) ಶೇರುಗಳಲ್ಲಿ: ದಿ: 31–03–2023ಕ್ಕೆ ಸಂಘವು ರೂ.1,86,11,100.00 ಮೊತ್ತದ ಸಹಕಾರಿ ಸಂಘಗಳ ಶೇರುಗಳನ್ನು ಹೊಂದಿದೆ. ಆ ಪೈಕಿ ರೂ. 1,85,00,000.00ನ್ನು ಜಿಲ್ಲಾ ಮಧ್ಯವರ್ತಿ ಬ್ಯಾಂಕಿನ ಶೇರಿನಲ್ಲಿ ತೊಡಗಿಸಲಾಗಿದೆ.

(ಬ) ನಿಶ್ಚಿತ ಅವಧಿಯ ಠೇವಣಿಗಳಲ್ಲಿ : ನಿಯಮಾನುಸಾರ ಕಾಯ್ದಿಟ್ಟ ನಿಧಿ ಠೇವಣಿ ರೂ.2,84,85,000.00 ಮತ್ತು ಉಳಿದ ಹೆಚ್ಚುವರಿ ಬಂಡವಾಳ ಪೈಕಿ ರೂ.3,00,01,000.00 ರಖಮನ್ನು ಕೆಡಿಸಿಸಿ ಬ್ಯಾಂಕಿನಲ್ಲಿ, ರೂ. 6,16,27,613.00 ರಖಮನ್ನು ಟಿಎಸ್‌ಎಸ್ ಲಿ., ಶಿರಸಿಯಲ್ಲಿ ಹಾಗೂ ರೂ.25,00,000.00 ಗಳನ್ನು ಕೆಆರ್‌ಎಂ., ಶಿವಮೊಗ್ಗದಲ್ಲಿ ಠೇವಣಿಯಾಗಿ ಹೂಡಿಕೆ ಮಾಡಲಾಗಿದೆ.

**10. ಬಡ್ಡಿ ಆದಾಯ ಹಾಗೂ ಲಾಭ :**



ಸಂಘವು ಪತ್ತಿನ ವ್ಯವಹಾರ ಮಾತ್ರ ನಡೆಸುತ್ತಿರುವುದರಿಂದ ವರದಿ ಸಾಲಿನಲ್ಲಿ ಸಾಲಗಳ ಮೇಲಿನ ಬಡ್ಡಿ ವಸೂಲಿ ಮತ್ತು ಹೂಡಿಕೆಗಳಿಂದ ಬಂದ ಬಡ್ಡಿಗಳಿಕೆ ಮಾತ್ರ ಮುಖ್ಯ ಆದಾಯದ ಮೂಲಗಳಾಗಿರುತ್ತದೆ. ಸಂಘವು ವರದಿ ಸಾಲಿನಲ್ಲಿ ಗಳಿಸಿದ ಅಂತೂ ಆದಾಯದಲ್ಲಿ ನಿಯಮಾನುಸಾರ ಖರ್ಚು ಮತ್ತು ಅನುವು ಹಾಗೂ ಮುನ್ನೇರ್ಪಾಡು ಬಾಬ್ತುಗಳನ್ನು ಕಳೆಯಲಾಗಿ, ವರ್ಷಾಂತ್ಯಕ್ಕೆ ಸಂಘವು ರೂ. 1,19,64,608.30ನಿಕ್ಕಿ ಲಾಭಗಳಿಸಿರುತ್ತದೆ. ಸಂಘದ ಬಂಡವಾಳಕ್ಕೆ ಪರಿಗಣಿಸಿದಾಗ ಪ್ರತಿ 100 ರೂಪಾಯಿಗೆ ರೂ. 0.84ಲಾಭ ಗಳಿಸಿರುತ್ತದೆ.

**11. ಸನ್ 2022–23ನೇ ಸಾಲಿನ ಲಾಭ ವಿಭಾಗಣೆ :**

ಸನ್ 2022–23ರಲ್ಲಿ ಸಂಘವು ಗಳಿಸಿದ ನಿಕ್ಕಿ ಲಾಭ ರೂ.1,19,64,608.30ನ್ನು ಈ ಕೆಳಗಿನಂತೆ ವಿಭಾಗಣೆ ಮಾಡಲು ಸಂಘದ ಆಡಳಿತ ಮಂಡಳಿಯವರು ಸರ್ವಸಾಧಾರಣ ಸಭೆಗೆ ಶಿಫಾರಸ್ಸು ಮಾಡಿರುತ್ತಾರೆ.

| ನಿಧಿಗಳು | ಶೇಕಡಾವಾರು | ಸೂಚಿತ ಲಾಭ ವಿಭಾಗಣೆ | ಲಾಭದಲ್ಲಿ ಬಾಕಿ ಉಳಿಯುವ ರಖಂ |
|---|---|---|---|
| ನಿಕ್ಕಿ ಲಾಭ | | | 1,19,64,608.30 |
| ರಿಝರ್ವ ಫಂಡ್ | 25 | 29,91,152.00 | 89,73,456.30 |
| ಸಹಕಾರ ಶಿಕ್ಷಣ ನಿಧಿ | 2 | 1,79,469.00 | 87,93,987.30 |
| ಸಂಜೀವಿನಿ ನಿಧಿ | 10 | 11,96,461.00 | 75,97,526.30 |
| ಕಟ್ಟಡ ನಿಧಿ | 25 | 18,99,382.00 | 56,98,144.30 |
| ನೌಕರರ ಬೋನಸ್ಸು | 1MONTH | 6,08,111.00 | 50,90,033.30 |
| ಧರ್ಮಾರ್ಥ ನಿಧಿ | 10 | 5,09,003.00 | 45,81,030.30 |
| ಸಿಬ್ಬಂದಿ ಕಲ್ಯಾಣ ನಿಧಿ | 5 | 2,29,052.00 | 43,51,978.30 |
| ತೋಟಗಾರರ ಕಲ್ಯಾಣ ನಿಧಿ | 6.3 | 2,74,175.00 | 40,77,803.30 |
| ಲಾಭಾಂಶ (5%) | 5% | 40,76,225.00 | 1,578.30 |
| ರಿಝರ್ವ ಫಂಡ್ (ಹಂಚಿಕೆ ಆಗದೇ ಇರುವ ಲಾಭ) | | 1,578.30 | 0.00 |
| | | 1,19,64,608.30 | |

**12. ಪತ್ತು ಮತ್ತು ಮಾರಾಟ ಜೋಡಣೆ :**

ಸದಸ್ಯರು ನಮ್ಮ ಸಂಘದ ಮುಖಾಂತರ ಮಾರಾಟ ಸಹಕಾರ ಸಂಘಗಳಲ್ಲಿ ವರದಿ ವರ್ಷದಲ್ಲಿ 19,899.89 ಕ್ವಿಂಟಲ್ ಮಹಸೂಲು ಬಾಬ್ತು ರೂ.51,14,40,041.00 ವಿಕ್ರಿಯಿಸಿರುತ್ತಾರೆ. ವರದಿ ವರ್ಷದ ಕೊನೆಗೆ 584.8 ಕ್ವಿಂಟಲ್ ಮಹಸೂಲು ಶಿಲ್ಕು ಇರುತ್ತದೆ. ಅಲ್ಲದೆ ನಮ್ಮ ಸಂಘದ ಬಹುತೇಕ ಸದಸ್ಯರು ದಿ ತೋಟಗಾರ್ಸ್ ಕೋ–ಆಪ್. ಸೇಲ್ ಸೊಸೈಟಿಯಲ್ಲಿ ನೇರವಾಗಿ ಮಹಸೂಲ ವಿಕ್ರಿ ಮಾಡಿ ಸಕಾಲದಲ್ಲಿ ಸಾಲ ಮರುಪಾವತಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ಸಂಘದ ಮುಖಾಂತರ ವಿಕ್ರಿ ಮಾಡಿದ ಸದಸ್ಯರಿಗೆ ಮತ್ತು ಸಂಘಕ್ಕೆ ವರದಿ ವರ್ಷದಲ್ಲಿ ರೂ.20,35,015.00 ಸೇಲ್ಸ್ ರಿಬೇಟ್ ಹಾಗೂ ಪ್ರೋತ್ಸಾಹನ ದೊರೆತಿರುತ್ತದೆ.

**13. ಆಡಳಿತ ಮಂಡಳಿ ವ ಇತರ ಸಭೆಗಳು :**



ವರದಿ ಸಾಲಿನಲ್ಲಿ ಸರ್ವಸದಸ್ಯರ 1 ವಾರ್ಷಿಕ ಸಾಮಾನ್ಯ ಸಭೆ 12 ಆಡಳಿತ ಮಂಡಳಿಯ ಸಭೆಗಳು, 29 ಸಾಲದ ಉಪಸಮಿತಿ ಸಭೆಗಳು ನಡೆದಿರುತ್ತವೆ.

**14. ಸಿಬ್ಬಂದಿ :**



ವರದಿ ವರ್ಷಾಂತ್ಯಕ್ಕೆ ಸಂಘದಲ್ಲಿ 15 ಖಾಯಂ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೇ 3 ಗುತ್ತಿಗೆ ಸಿಬ್ಬಂದಿಗಳು 2 ತರಬೇತಿ ಅಭ್ಯರ್ಥಿಗಳು ಮತ್ತು 1 ರಾತ್ರಿ ಪಾಳಿ ಭದ್ರತಾ ಸಿಬ್ಬಂದಿ ಕೆಲಸ ನಿರ್ವಹಿಸುತ್ತಿದ್ದಾರೆ. ಸಂಘದ ಸದಸ್ಯರ ಸಂಖ್ಯೆ ಹಾಗೂ ವ್ಯವಹಾರಗಳು ಗಣನೀಯವಾಗಿ ಹೆಚ್ಚಾಗಿದ್ದರೂ ನೌಕರ ವರ್ಗದವರು ತಾಳ್ಮೆಯಿಂದ ಸಮರ್ಥವಾಗಿ ದಕ್ಷತೆಯಿಂದ, ಸದಸ್ಯರೊಡನೆ ಉತ್ತಮ ಸಂಬಂಧವಿಟ್ಟು ಕಾರ್ಯ ನಿರ್ವಹಿಸುತ್ತಿದ್ದಾರೆ. ಸಂಘದ ಮುಖ್ಯ ಕಾರ್ಯನಿರ್ವಾಹಕ ಹುದ್ದೆಗೆ ಶ್ರೀ ರಮೇಶ ಎಂ. ಹೆಗಡೆ, ಬಾಳೆಗದ್ದೆ ಇವರ ಸೇವೆಯನ್ನು ಟಿ.ಎಸ್.ಎಸ್.ಲಿ., ಶಿರಸಿ ಇವರಿಂದ ಎರವಲು ಪಡೆದು ಪ್ರಸಕ್ತ ವರ್ಷದಲ್ಲಿಯೂ ಮುಂದುವರೆಸಲಾಗಿದೆ.

**15. ಇತರ ಚಟುವಟಿಕೆಗಳು :**



ನಮ್ಮ ಟಿಆರ್‌ಸಿ ಸಂಪೂರ್ಣ ಗಣಕೀಕೃತವಾಗಿದ್ದು, ಸದಸ್ಯರ ಕೃಷಿ ಸಂಬಂಧಿತ ಹಣಕಾಸಿನ ಸಮಸ್ಯೆಗಳಿಗೆ, ಅವಶ್ಯಕತೆಗಳಿಗೆ ಪರಿಹಾರ ಒದಗಿಸುವ ಕಾರ್ಯದಲ್ಲಿ ನಿರತವಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಉತ್ತಮ ಸಹಕಾರಿ ಸಂಸ್ಥೆಗಳಲ್ಲೊಂದಾಗಿದೆ ಎಂದು ಹೇಳಿಕೊಳ್ಳಲು ನಮಗೆ ಅತ್ಯಂತ ಹೆಮ್ಮೆ ಎನಿಸುತ್ತದೆ. ಸಂಘವು ನಡೆಸುತ್ತಿರುವ ಪತ್ತೇತರ ಚಟುವಟಿಕೆಗಳು ಈ ಕೆಳಗಿನಂತಿವೆ.

**1. ಬೆಳೆವಿಮೆ:**



ಪ್ರಸಕ್ತ ಸಾಲಿನಲ್ಲಿ ಸದಸ್ಯರಿಂದ ಅಡಿಕೆ ಬೆಳೆ ವಿಮೆ ರೂ.87,32,095.00 ಹಾಗೂ ಭತ್ತದ ಬೆಳೆ ವಿಮೆ 3,41,767.00 ಒಟ್ಟೂ ರೂ. 90,73,862.00 ಬೆಳೆ ವಿಮಾ ಪ್ರೀಮಿಯಂ ಜಮಾ ಪಡೆದು ಬೆಳೆ ವಿಮಾ ಯೋಜನೆಗೆ ಪಾವತಿಸಲಾಗಿದೆ.

**2. ಸಂಜೀವಿನಿ ನಿಧಿ :**



31–03–2023 ರವರೆಗೆ ಸಂಜೀವಿನಿ ನಿಧಿಯಲ್ಲಿ ರೂ. 1,33,57,065.00 ಜಮಾ ಇರುತ್ತದೆ. ದಾನಿಗಳು ಈ ನಿಧಿಗೆ ಹೆಚ್ಚಿನ ಪ್ರಮಾಣದಲ್ಲಿ ದೇಣಿಗೆ ನೀಡುವುದರ ಮೂಲಕ ಆರ್ಥಿಕವಾಗಿ ನೊಂದ ಸದಸ್ಯರಿಗೆ ನೆರವಾಗುವ ನಮ್ಮ ಉದ್ದೇಶಕ್ಕೆ ಪೂರ್ಣ ಬೆಂಬಲ ನೀಡಬೇಕಾಗಿ ಕೋರಿಕೆ.

**4. ಬ್ಯಾಂಕಿಂಗ್ ಸೌಲಭ್ಯ :**




ಸದಸ್ಯರಿಗೆ ಪರ ಸ್ಥಳದಿಂದ ಹಣ ಪಾವತಿಸಲು ಹಾಗೂ ಹಣ ಪಡೆಯಲು ಅನುಕೂಲವಾಗುಂತೆ **RTGS, NEFT** ಸೌಲಭ್ಯವನ್ನು ಒದಗಿಸುವುದರೊಂದಿಗೆ ಸಂಘವು ನೂತನವಾಗಿ ಅಭಿವೃದ್ಧಿ ಪಡಿಸಿದ ಕೋ–ವ್ಯಾಲೆಟ್ ತಂತ್ರಾಂಶದ ಮೂಲಕ ಸದಸ್ಯರು ತಾವಿರುವ ಸ್ಥಳದಿಂದಲೇ ಅವರ ಖಾತೆಯಲ್ಲಿನ ಹಣವನ್ನು ವರ್ಗಾವಣೆ ಮಾಡಿಕೊಳ್ಳಬಹುದಾದಂತಹ ನೂತನ ಸೌಲಭ್ಯವನ್ನು ನೀಡಲಾಗಿದೆ.

**5. ಭದ್ರತಾ ಕೋಶದ ವ್ಯವಸ್ಥೆ :**



ಸಂಘವು ಸದಸ್ಯರಿಗೆ ಕಡಿಮೆ ದರದಲ್ಲಿ ಭದ್ರತಾಕೋಶದ ವ್ಯವಸ್ಥೆಯನ್ನು ಕಲ್ಪಿಸಿದ್ದು ಹೆಚ್ಚಿನ ಸದಸ್ಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ರಾತ್ರಿ ಕಾವಲಿಗಾಗಿ ಸಿಬ್ಬಂದಿಯನ್ನು ನೇಮಿಸಿದ್ದು, ಸಂಘದ ನವೀಕೃತ ಕಟ್ಟಡದಲ್ಲಿಯೂ ಸಹ ಸಿಸಿ ಕ್ಯಾಮರಾವನ್ನು ಅಳವಡಿಸಿ ಕಛೇರಿಗೆ ಗರಿಷ್ಠ ಭದ್ರತಾ ವ್ಯವಸ್ಥೆ ಮಾಡಲಾಗಿದೆ.

**6. ಉತ್ತಮ ಸದಸ್ಯ ಪ್ರಶಸ್ತಿ :**



ಸದಸ್ಯರ ಉತ್ತಮ ವ್ಯವಹಾರವನ್ನು ಪ್ರೋತ್ಸಾಹಿಸಿ ಹಾಗೆಯೇ ಮುಂದುವರೆಸಿಕೊಂಡು ಹೋಗಲು ಅವರನ್ನು ಉತ್ತೇಜಿಸುವ ದೃಷ್ಟಿಯಿಂದ 2008ರಿಂದ ಇದುವರೆಗೆ 171 ಸದಸ್ಯರಿಗೆ 'ಉತ್ತಮ ಸದಸ್ಯ' ಮತ್ತು 11 ಸದಸ್ಯರಿಗೆ 'ಪ್ರಗತಿಪರ ಕೃಷಿಕ' ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಲಾಗಿದೆ.

ಸಂಘವು ಸನ್ 2022–23ನೇ ಸಾಲಿನಲ್ಲಿಯೂ ಈ ಮೊದಲಿನಂತೆ ಪ್ರಗತಿ ಪಥದಲ್ಲಿ ಸಾಗಿದೆ. ಸದಸ್ಯರು ತಮಗೆ ಆರ್ಥಿಕ ಅವಶ್ಯಕತೆಗಳುಂಟಾದಾಗ, ತುರ್ತು ಸಂದರ್ಭಗಳಲ್ಲಿ ಸಾಲಗಳನ್ನು ಪಡೆದುಕೊಳ್ಳುವುದು ಅನಿವಾರ್ಯ. ಆದರೆ ಪಡೆದ ಸಾಲವು ಉದ್ದೇಶಿತ ಕಾರ್ಯಗಳಿಗೆ ಮಾತ್ರವೇ ವಿನಿಯೋಗವಾಗುವಂತೆ ಎಚ್ಚರವಹಿಸಬೇಕು. ಅಲ್ಲದೇ ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವ ಪ್ರಾಮಾಣಿಕತೆಯನ್ನು ರೂಢಿಸಿಕೊಳ್ಳಬೇಕು. ಇದರಿಂದ ಸಂಘವೂ ಅಭಿವೃದ್ಧಿ ಹೊಂದುತ್ತದೆ. ಸದಸ್ಯರಿಗೂ ಒಳಿತಾಗುತ್ತದೆ. ಮಾನ್ಯ ಸದಸ್ಯರು ಈ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತಾರೆಂಬ ನಂಬಿಕೆ ನಮ್ಮದು.

ಸಹಕಾರ ಸಂಘಗಳ ಕಾಯಿದೆ, ನಿಯಮಗಳಲ್ಲಾದ ಬದಲಾವಣೆಯಿಂದಾಗಿ ಸಂಘದ ಕಾರ್ಯ ಚಟುವಟಿಕೆಗಳಲ್ಲಿ, ದೈನಂದಿನ ವ್ಯವಹಾರ ಪದ್ಧತಿಯಲ್ಲಿ ಹಾಗೂ ಆಡಳಿತ ನಿರ್ವಹಣೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳುವುದು ಅವಶ್ಯಕವಾಗಿದೆ. ಈ ಮೊದಲು ಸೇವೆಯೊಂದೇ ಸಹಕಾರಿ ಸಂಘದ ಮೂಲ ಉದ್ದೇಶವಾಗಿತ್ತು. ಆದರೆ ಸಹಕಾರ ಕಾಯಿದೆಗೆ ಇತ್ತೀಚಿನ ವರ್ಷಗಳಲ್ಲಿನ ತಿದ್ದುಪಡಿಗಳಿಂದಾಗಿ ಈಗ ವ್ಯವಹಾರಿಕವಾಗಿ ಲಾಭಗಳಿಕೆಯ ಕಡೆಗೂ ಗಮನಹರಿಸುವುದು ಅನಿವಾರ್ಯವಾಗಿದೆ. ಜೊತೆಗೆ ಆರ್ಥಿಕ ಶಿಸ್ತು ಪಾಲಿಸುವುದೂ ಕಡ್ಡಾಯವಾಗಿದೆ. ಈ ಎಲ್ಲ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರಲ್ಲಿ ನಾವು ಮನವಿ ಮಾಡಿಕೊಳ್ಳುವುದೇನೆಂದರೇ ಸಂಘದೊಡನೆ ವ್ಯವಹರಿಸುವಾಗ ವ್ಯವಹಾರಿಕ ನಿಯಮ, ಆರ್ಥಿಕ ಶಿಸ್ತು ಪರಿಪಾಲನೆ ಕಡೆಗೂ ತಮ್ಮ ಗಮನವಿರಲಿ. ಪಡೆದ ಸಾಲವನ್ನು ಅಂತಿಮ ವಾಯಿದೆಯ ಅವಧಿಯೊಳಗೆ ಮರುಪಾವತಿಸುವ ರೂಢಿಯನ್ನು ಅವಶ್ಯವಾಗಿ ಪಾಲಿಸಿರಿ. ಇದರಿಂದಾಗಿ ಅವಧಿ ನಂತರ ವಸೂಲಾಗುವ ಸಾಲಗಳಿಗೆ ವಿಧಿಸುವ ದಂಡದ ಬಡ್ಡಿ ಆಕರಣೆಯಿಂದ ವಿನಾಯತಿ ಪಡೆಯಬಹುದು. ಜೊತೆಗೆ ಅನುತ್ಪಾದಕ ಆಸ್ತಿಗಳಿಗೆ ಸಂಘವು ಅನುವು ಮಾಡಿಡಬೇಕಾದ ಪ್ರಸಂಗವೂ ಉದ್ಭವವಾಗುವುದಿಲ್ಲ. ಸಾಲ ಪಡೆದ ಮಾನ್ಯ ಸದಸ್ಯರು ಈ ವಿಷಯವನ್ನು ತೀರಾ ಗಂಭೀರವಾಗಿ ಪರಿಗಣಿಸಿ ಸೂಕ್ತ ರೀತಿಯಲ್ಲಿ ಕ್ರಮವಹಿಸಿ ಮುಂದಿನ ದಿನಗಳಲ್ಲಿ ವ್ಯವಹರಿಸಲು ಈ ಮೂಲಕ ಮತ್ತೊಮ್ಮೆ ಮನವಿ ಮಾಡಿದೆ.

ಪ್ರಸಕ್ತ ವರ್ಷವೂ ಎಸ್.ಕೆ.ಸಿ.ಸಿ. ಸಾಲವು (ಬೆಳೆ ಸಾಲ) ಬಡ್ಡಿ ರಹಿತವಾಗಿದ್ದು ರೈತರಿಗೆ ವರದಾನವಾಗಿದೆ. ಆದರೆ ಸಾಲದ ವ್ಯವಹಾರದಲ್ಲಿ ಸಂಘಕ್ಕೆ ನಿಯಮಾನುಸಾರವಾಗಿ ನೀಡಬೇಕಾದ ಕನಿಷ್ಠ ಮಾರ್ಜಿನ್ (ಉಳಿಕೆ/ಲಾಭ) ಸಹ ಸಕಾಲದಲ್ಲಿ ಸಂಘಕ್ಕೆ ಜಮಾ ಬರುತ್ತಿಲ್ಲ. ಆದಾಗಿಯೂ ಇಂತಹ ವ್ಯವಹಾರಿಕ ನಷ್ಟವನ್ನು ಸಂಘವು ತಾನೇ ಭರಿಸಿಕೊಂಡು ರೈತರ ಹಿತದೃಷ್ಟಿಯಿಂದ ಕಾರ್ಯ ನಿರ್ವಹಿಸುತ್ತಿದ್ದು ಮಾನ್ಯ ಸದಸ್ಯರು ಇದನ್ನು ಮನಗಾಣಬೇಕಾಗಿ ಕೋರಿಕೆ.

**7. ಧನಸಹಾಯ:**



ಟಿಎಸ್‌ಎಸ್ ಶ್ರೀಪಾದ ಹೆಗಡೆ, ಕಡವೆ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಟಿಎಸ್‌ಎಸ್ ಆಸ್ಪತ್ರೆ)ಬ್ಲಡ್ ಬ್ಯಾಂಕ್ ವಿಭಾಗಕ್ಕೆ ಡೋನರ್ಸ್ ಕೋಚ್ ಖರೀದಿಸಲು 1.68 ಲಕ್ಷ ರೂ.ಗಳನ್ನು ವರದಿ ವರ್ಷದಲ್ಲಿ ಸಂಘದಿಂದ ದೇಣಿಗೆ ನೀಡಲಾಗಿದೆ.

ಅಲ್ಲದೆ ಸಂಘದಿಂದ ಟಿಎಸ್‌ಎಸ್ ಆಸ್ಪತ್ರೆಗೆ ಈ ಹಿಂದಿನ ವರ್ಷಗಳಲ್ಲಿಯೂ ಸಹ ಹೆಚ್ಚಿನ ಮೊತ್ತದ ಧನಸಹಾಯ ನೀಡಿದ್ದು ಸಂಘದ ಸದಸ್ಯರು ಟಿಎಸ್‌ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಂದರ್ಭ ಬಂದಲ್ಲಿ ಸಂಘದಿಂದ ದೃಢೀಕರಣ ಪತ್ರ ಪಡೆದು ರಿಯಾಯಿತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಸಂಘದಿಂದ ಧನಸಹಾಯ ಪಡೆದು ಸಮರ್ಪಕವಾಗಿ ಬಳಸಿದ ಟಿಎಸ್‌ಎಸ್ ಆಸ್ಪತ್ರೆಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳಿಗೆ ಧನ್ಯವಾದಗಳು.

**8 ಸಂತಾಪ:**



ವರದಿ ಸಾಲಿನಲ್ಲಿ ಸಂಘದ 57 ಸದಸ್ಯರು ಮೃತರಾಗಿದ್ದು, ಸಂಘದೊಂದಿಗೆ ಅವರ ಉತ್ತಮ ವ್ಯವಹಾರ ಹಾಗೂ ಸಂಘದ ಅಭಿವೃದ್ಧಿಯಲ್ಲಿನ ಅವರ ಕೊಡುಗೆಯನ್ನು ಸ್ಮರಿಸಿ, ಅವರ ದಿವ್ಯಾತ್ಮಕ್ಕೆ ಚಿರಶಾಂತಿ ದೊರೆಯಲೆಂದು ಹಾಗೂ ಅವರ ಕುಟುಂಬವರ್ಗದವರಿಗೆ ದುಃಖ ಸಹಿಸುವ ಶಕ್ತಿಯನ್ನು ಭಗವಂತ ನೀಡಲೆಂದು ಪ್ರಾರ್ಥಿಸುತ್ತೇವೆ.

**ಉಪಸಂಹಾರ :**

ರಾಜ್ಯ, ಕೇಂದ್ರ ಸರಕಾರಗಳೆರಡೂ ಕಾಲಕಾಲಕ್ಕೆ ಬಡ್ಡಿ ರಿಯಾಯಿತಿ, ಬಡ್ಡಿ ಮನ್ನಾ ಯೋಜನೆಗಳನ್ನು ಜಾರಿಗೆ ತಂದು ನೇರವಾಗಿ ರೈತರಿಗೆ ಆರ್ಥಿಕ ಲಾಭ ನೀಡುತ್ತಿವೆ. ಘನ ಸರ್ಕಾರಗಳಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ಹೇಳಬಯಸುತ್ತೇವೆ.

ನಮ್ಮ ಸಂಘದ 2022–23ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧನೆ ನಡೆಸಿರುವ ಶ್ರೀ ಸತೀಶ ಹೆಗಡೆ, ಚಾರ್ಟರ್ಡ್ ಅಕೌಂಟೆಂಟ್ಸ್, ಯಲ್ಲಾಪುರ ಇವರಿಗೆ ಕೃತಜ್ಞರಾಗಿದ್ದೇವೆ. ಸಂಘಕ್ಕೆ ಕಾಲ–ಕಾಲಕ್ಕೆ ಭೇಟಿ ಕೊಟ್ಟು ಸೂಕ್ತ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ಉಪ ನಿಬಂಧಕರು,

ಸಹಕಾರ ಇಲಾಖೆ, ಕಾರವಾರ, ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಕಾರವಾರ ಹಾಗೂ ಕಚೇರಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳು. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿರಸಿ ಅವರಿಗೂ ಹಾಗೂ ಕಛೇರಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ನಾವು ಕೃತಜ್ಞರಾಗಿದ್ದೇವೆ.

ರೈತರ ಪಹಣಿ ಪತ್ರಿಕೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಸೂಕ್ತ ಸಲಹೆ ನೀಡಿ ಸಹಕರಿಸುತ್ತಿರುವ ಸಂಘದ ಸಲಹೆಗಾರರಾದ ಶ್ರೀ ಎಂ. ಆರ್. ಹೆಗಡೆ ಇವರಿಗೆ ಮತ್ತು ಇನ್ನೋರ್ವ ಸಲಹೆಗಾರರಾದ ಶ್ರೀ ಎಸ್. ಎಂ. ಹೆಗಡೆ ಇವರಿಗೆ ನಾವು ಆಭಾರಿಯಾಗಿದ್ದೇವೆ. ಆದಾಯ ತೆರಿಗೆ ಕಾಯಿದೆ ಹಾಗೂ ಇನ್ನಿತರ ವಿಷಯಗಳಲ್ಲಿ ಸಂಸ್ಥೆಗೆ ಕಾಲಕಾಲಕ್ಕೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಿರುವ ಆದಾಯ ತೆರಿಗೆ ಸಲಹೆಗಾರರಾದ ಸಿ.ಎ. ಪ್ರಕಾಶ ಹೆಗಡೆ, ಹುಳಗೋಳ ಹಾಗೂ ಸರಕು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿ ಸಲಹೆ ಸೂಚನೆಗಳನ್ನು ನೀಡುತ್ತಿರುವ ಶ್ರೀ ಆರ್.ಜಿ. ಭಟ್, ಕಳವೆ ಇವರಿಗೂ ನಾವು ಸಂಘದ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತಿದ್ದೇವೆ.

ನಮ್ಮ ದಿನನಿತ್ಯದ ಹಣಕಾಸಿನ ಅವಶ್ಯಕತೆಯನ್ನು ಪೂರೈಸಿ ಸಂಘವು ಪ್ರಗತಿ ಪಥದಲ್ಲಿ ಮುನ್ನಡೆಯಲು ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸುತ್ತಿರುವ ದಿ ಕೆ.ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರು,ಆಡಳಿತ ಮಂಡಳಿ ಸದಸ್ಯರು, ವ್ಯವಸ್ಥಾಪಕ ನಿರ್ದೇಶಕರು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರಿಗೂ ಹಾಗೂ ಕೆ.ಡಿ.ಸಿ.ಸಿ. ಬ್ಯಾಂಕಿನ ಹೊಸ ಮಾರುಕಟ್ಟೆ ಶಾಖೆಯ ವ್ಯವಸ್ಥಾಪಕರು, ಮೇಲ್ವಿಚಾರಕರು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರಿಗೂ ನಾವು ಕೃತಜ್ಞರಾಗಿದ್ದೇವೆ.

**ನಮ್ಮ ಸದಸ್ಯರ ಕೃಷಿ ಮಹಸೂಲನ್ನು ಸುವ್ಯವಸ್ಥಿತವಾಗಿ ಅವರ ಬೇಡಿಕೆಯಂತೆ ಕಾಲ–ಕಾಲಕ್ಕೆ ಸರಿಯಾಗಿ ವಿಕ್ರಿ ಮಾಡಲು ಸಹಕಾರ ನೀಡಿದ್ದಲ್ಲದೆ ದಿನನಿತ್ಯದ ಹಣಕಾಸಿನ ಅವಶ್ಯಕತೆಗೆ ಸ್ಪಂದಿಸಿ ಸಕಾಲದಲ್ಲಿ ನೆರವು ನೀಡುತ್ತಿರುವ ದಿ ಟಿ.ಎಸ್.ಎಸ್. ಲಿ., ಶಿರಸಿ ಇದರ ಅಧ್ಯಕ್ಷರಾದ ಶ್ರೀ ಶಾಂತಾರಾಮ ಹೆಗಡೆ, ಶೀಗೇಹಳ್ಳಿ ಹಾಗೂ ಆಡಳಿತ ಮಂಡಳಿಯ ಎಲ್ಲ ಸದಸ್ಯರುಗಳಿಗೆ ಮತ್ತು ಪ್ರಧಾನ ವ್ಯವಸ್ಥಾಪಕರು ಹಾಗೂ ಎಲ್ಲ ಸಿಬ್ಬಂದಿ ವರ್ಗದವರಿಗೆ ನಮ್ಮ ಅನಂತ ಧನ್ಯವಾದಗಳು.**

ನಮ್ಮ ಸದಸ್ಯರ ಕೃಷಿ ಮಹಸೂಲನ್ನು ವಿಕ್ರಿ ಮಾಡಲು ಸಹಕಾರ ನೀಡುತ್ತಿರುವ ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿಯಮಿತ ಶಿರಸಿ ಇದರ ಅಧ್ಯಕ್ಷರಿಗೆ ಹಾಗೂ ಆಡಳಿತ ಮಂಡಳಿಯ ಸದಸ್ಯರುಗಳಿಗೆ, ಪ್ರಧಾನ ವ್ಯವಸ್ಥಾಪಕರು ಹಾಗೂ ಎಲ್ಲ ಸಿಬ್ಬಂದಿ ವರ್ಗದವರಿಗೆ ನಮ್ಮ ಧನ್ಯವಾದಗಳು.

ದಿನನಿತ್ಯದ ಹಣಕಾಸಿನ ವ್ಯವಹಾರದಲ್ಲಿ ಸೂಕ್ತವಾಗಿ ಸ್ಪಂದಿಸಿ, ಸಹಕರಿಸುತ್ತಿರುವ ಬ್ಯಾಂಕ್ ಆಫ್ ಬರೋಡಾ ಶಿರಸಿ, ಸ್ಟೇಟ್ ಬ್ಯಾಂಕ್ ಶಿರಸಿ, ಕೆನರಾ ಬ್ಯಾಂಕ್ ಶಿರಸಿ, ಇಂಡಿಯನ್ ಬ್ಯಾಂಕ್ ಶಿರಸಿ, ಬ್ಯಾಂಕ್ ಆಫ್ ಇಂಡಿಯಾ ಶಿರಸಿ, ಕರ್ನಾಟಕ ಬ್ಯಾಂಕ್ ಶಿರಸಿ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಿರಸಿ, ಕೋಟಕ್ ಮಹೀಂದ್ರಾ ಬ್ಯಾಂಕ್, ಶಿರಸಿ, ಹಾಗೂ ಐಡಿಎಫ್‌ಸಿ ಫಸ್ಟ್ ಬ್ಯಾಂಕ್, ಶಿರಸಿ ಶಾಖೆ ಇದರ ಶಾಖಾ ವ್ಯವಸ್ಥಾಪಕರು ಹಾಗೂ ಸಿಬ್ಬಂದಿಗಳಿಗೆ ಸಂಘದ ಪರವಾಗಿ ಧನ್ಯವಾದಗಳು.

ಸಂಘಕ್ಕೆ ಕಾಲ–ಕಾಲಕ್ಕೆ ಭೇಟಿ ಕೊಟ್ಟು ಸೂಕ್ತ ಸಲಹೆ ಸೂಚನೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ನಬಾರ್ಡ್‌ನ ಅಧಿಕಾರಿಗಳಿಗೆ ಧನ್ಯವಾದಗಳು.

ಸಂಘದೊಂದಿಗೆ ನಿರಂತರ ಸಂಪರ್ಕವಿಟ್ಟುಕೊಂಡು, ರೈತರಿಗೆ ಅನುಕೂಲವಾಗುವ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಹಕರಿಸುತ್ತಿರುವ ಕೃಷಿ ಇಲಾಖೆ ಮತ್ತು ತೋಟಗಾರಿಕಾ ಇಲಾಖೆ ಹಾಗೂ ತೋಟಗಾರಿಕಾ ಕಾಲೇಜಿನ ಅಧಿಕಾರಿಗಳಿಗೂ ನಾವು ಆಭಾರಿಯಾಗಿದ್ದೇವೆ. ನಮ್ಮ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಹಾಗೂ ಸದಸ್ಯರುಗಳ ಸಮಸ್ಯೆಗಳನ್ನು, ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಕೃಷಿ, ಕೃಷಿಕ, ಕೃಷಿ ಪತ್ತು ಸಂಘಗಳ ಶ್ರೇಯೋಭಿವೃದ್ಧಿ ಟ್ರಸ್ಟ್(ರಿ) ಶಿರಸಿ ಇದು ಸದಾ ಕಾರ್ಯ ಪ್ರವೃತ್ತವಾಗಿರುವುದನ್ನು ಶ್ಲಾಘಿಸುತ್ತೇವೆ ಮತ್ತು ನಮ್ಮ ಸಂಘದ ಪ್ರೇರಣೆಯಿಂದ ಸ್ಥಾಪಿಸಲಾದ ತೋಟಗಾರ್ಸ್ ಗ್ರೀನ್ ಗ್ರೂಪ್ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಇದರ ಪದಾಧಿಕಾರಿಗಳಿಗೆ ನಮ್ಮ ಸಂಘದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ.

**ಕೊನೆಯ ಮಾತು:**



ತಮಗೆಲ್ಲರಿಗೂ ತಿಳಿದಿರುವಂತೆ ಸಹಕಾರಿ ಸಂಘದ ಮುಖ್ಯ ಧ್ಯೇಯ ಸದಸ್ಯರ ಏಳ್ಗೆ ಸಾಧಿಸುವುದು. ಆ ಹಿನ್ನೆಲೆಯಲ್ಲಿ ಸಂಘವು ಕೆಲವೊಮ್ಮೆ ತನ್ನ ವ್ಯವಹಾರದಿಂದಾಗುವ ಲಾಭ–ನಷ್ಟ ಪರಿಗಣಿಸದೇ ಸದಸ್ಯರಿಗೆ ಸೇವೆ ಒದಗಿಸುತ್ತಿದೆ. ಆದ್ದರಿಂದ ಸದಸ್ಯರಲ್ಲಿ ಈ ಮೂಲಕ ನಾವು ವಿನಂತಿಸಿಕೊಳ್ಳುವುದೇನೆಂದರೆ, ಸಂಘದಿಂದ ಪಡೆದುಕೊಳ್ಳುವ ಆರ್ಥಿಕ ನೆರವನ್ನು ಸದುಪಯೋಗಪಡಿಸಿಕೊಳ್ಳಿ. ಅನುತ್ಪಾದಕ ವೆಚ್ಚಗಳನ್ನು ಕಡಿಮೆ ಮಾಡುವುದರ ಜೊತೆಗೆ ಉಳಿತಾಯ ಮನೋಭಾವನೆಯನ್ನು ರೂಢಿಸಿಕೊಳ್ಳಿ. ಪಡೆದ ಸಾಲ ಸದ್ವಿನಿಯೋಗಿಸಿ, ಅವಧಿಗೆ ಸರಿಯಾಗಿ ಮರುಪಾವತಿ ಮಾಡಿ. ಇದರಿಂದಾಗಿ ಸದಸ್ಯರ ಆರ್ಥಿಕ ಸ್ಥಿತಿ ಸುಧಾರಿಸುವುದರ ಜೊತೆಗೆ ಸಂಘವೂ ಸದೃಢವಾಗುತ್ತದೆ ಎಂಬುದನ್ನು ಸದಸ್ಯರೆಲ್ಲರೂ ಮನಗಾಣಬೇಕು. **ಮುಂದಿನ ದಿನಗಳಲ್ಲೂ ಇದೇ ರೀತಿಯ ಸಹಕಾರ ಬೆಂಬಲವನ್ನು ನಿಮ್ಮೆಲ್ಲರಿಂದಲೂ ನಿರೀಕ್ಷಿಸುತ್ತ ಸಹಕಾರಿ ಪಥದಲ್ಲಿ ಆರ್ಥಿಕ ಸ್ವಾವಲಂಬಿಗಳಾಗಿ ಸಮೃದ್ಧ ಭವಿಷ್ಯದೆಡೆಗೆ ಎಲ್ಲರೂ ಒಂದಾಗಿ ಸಾಗೋಣ ಎಂದು ಆಶಿಸುತ್ತಾ ಸರ್ವರಿಗೂ ಶುಭ ಹಾರೈಸಿ,** ಎಲ್ಲರ ಒಳಿತಿಗಾಗಿ ಪ್ರಾರ್ಥಿಸಿ, ವರದಿಯನ್ನು ಮುಕ್ತಾಯ ಮಾಡುತ್ತಿದ್ದೇವೆ.

**ಪರಸ್ಪರಂ ಭಾವಯಂತಃ ಶ್ರೇಯ ಪರಮವ್ಯಾಪ್ಸಥಃ**

ಧನ್ಯವಾದಗಳು.

ಆಡಳಿತ ಮಂಡಳಿಯ ಪರವಾಗಿ,

**ಶ್ರೀ ರಾಮಕೃಷ್ಣ ಶ್ರೀಪಾದ ಹೆಗಡೆ, ಕಡವೆ**

**ಅಧ್ಯಕ್ಷರು**

ದಿ ಟಿ.ಆರ್.ಸಿ.ಎ.ಸಿ. ಸೊಸೈಟಿ ಲಿ., ಶಿರಸಿ (ಉ.ಕ.)

**ಶಿರಸಿ (ಉ.ಕ.)**

**ದಿನಾಂಕ : 15–05–2023**

# ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ರಾಮಚಂದ್ರ ಗಣಪತಿ ಅಕದಾಸ**



**ಶ್ರೀ ತ್ರಯಂಬಕ ದೇವೇಂದ್ರ ಹೆಗಡೆ, ಜಾಲೀಮನೆ**

ಸನ್ 1957 ರಿಂದ 16-03-1992 ರ ವರೆಗೆ ಸಂಘದ ಮುಖ್ಯಕಾರ್ಯನಿರ್ವಾಹಕರಾಗಿ
ಕಾರ್ಯನಿರ್ವಹಿಸಿದ್ದ **ಶ್ರೀ ರಾಮಚಂದ್ರ ಗಣಪತಿ ಅಕದಾಸ** ಅವರು
ದಿನಾಂಕ: 23-01-2023ರಂದು ನಿಧನರಾಗಿರುತ್ತಾರೆ.
ಹಾಗೂ ಸನ್ 1965 ರಿಂದ ನಮ್ಮ ಸಂಘದ ಸದಸ್ಯರಾಗಿ
ಅತ್ಯುತ್ತಮ ರೀತಿಯಲ್ಲಿ ವ್ಯವಹರಿಸಿ ಸನ್ 1970-71ನೇ ಸಾಲಿನಿಂದ
1992-93ರ ವರೆಗೆ ನಮ್ಮ ಸಂಘದ ನಿರ್ದೇಶಕರಾಗಿ
ಸೇವೆ ಸಲ್ಲಿಸಿದ **ಶ್ರೀ ತ್ರಯಂಬಕ ದೇವೇಂದ್ರ ಹೆಗಡೆ, ಜಾಲೀಮನೆ**
ಅವರು ದಿನಾಂಕ: 08-03-2023 ರಂದು ನಿಧನರಾಗಿರುತ್ತಾರೆ.
ಸಂಘಕ್ಕೆ ಅವರುಗಳು ಸಲ್ಲಿಸಿದ ಪ್ರಾಮಾಣಿಕ ಸೇವೆಯನ್ನು ಸ್ಮರಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇವೆ.

---

**ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿವರ್ಗ**

## ದಿನಾಂಕ: 01–04–2022 ರಿಂದ 31–03–2023ರ ವರೆಗಿನ

| ಸನ್ 2021–2022 ರ ರಖಂ ರೂ. ಪೈಸೆ | ಹಾನಿ ವಿವರ | ಸನ್ 2022–2023 ರ ರಖಂ ರೂ. ಪೈಸೆ |
|---:|---|---:|
| 3,47,59,559.20 | ಠೇವುಗಳ ಮೇಲಿನ ಬಡ್ಡಿ | 3,96,82,113.00 |
| 2,59,988.00 | ಸಾಲಗಳ ಮೇಲಿನ ಬಡ್ಡಿ(ಕೆಡಿಸಿಸಿ ವ ಇತರ) | 70,266.00 |
| 2,82,604.00 | ಮುದ್ರಣ (ಪ್ರಿಂಟಿಂಗ್) | 2,14,216.00 |
| 44,150.00 | ಜಾಹೀರಾತು ವೆಚ್ಚ | 1,500.00 |
| 12,807.00 | ವರ್ತಮಾನ ಪತ್ರಿಕೆ | 21,355.00 |
| 68,037.00 | ಅಂಚೆ ವೆಚ್ಚ | 58,519.00 |
| 36,030.00 | ಸ್ಟೇಶನರಿ | 76,283.00 |
| 62,776.00 | ದೂರವಾಣಿ ವೆಚ್ಚ | 66,229.00 |
| 67,468.00 | ವಿಮೆ(ಆಫೀಸ್) | 67,469.00 |
| 1,57,329.00 | ಸಾಫ್ಟವೇರ್ ಮತ್ತು ಹಾರ್ಡ್‌ವೇರ ನಿರ್ವಹಣೆ ಖರ್ಚು | 1,07,008.00 |
| 57,794.00 | ಆಫೀಸ್ ಕಟ್ಟಡ ಕರ(ನಗರ ಸಭೆ) | 45,532.00 |
| 1,00,778.00 | ವಿದ್ಯುತ್ ವೆಚ್ಚ ಖಾತೆ | 1,20,956.00 |
| 8,03,436.00 | ಕಛೇರಿ ನಿರ್ವಹಣಾ ವೆಚ್ಚ | 7,93,100.00 |
| 3,920.00 | ವಾಹನ ನಿರ್ವಹಣಾ ವೆಚ್ಚ | 4,729.00 |
| -- | ಮೆಂಬರರ ವಿಕ್ರಿ ಪ್ರೋತ್ಸಾಹನ | 10,21,500.00 |
| 7,00,535.14 | ಇತರೆ | 8,53,834.47 |
| 42,045.00 | ಕಾಯಿದೆ ಸಲಹೆ ಫೀ | 1,13,670.00 |
| 1,38,831.00 | ಬೋರ್ಡ್ ಡೈರೆಕ್ಟರ ಭತ್ಯೆ | 2,84,340.00 |
| 70,73,003.00 | ನೌಕರರ ಪಗಾರು | 92,97,324.00 |
| 5,64,749.00 | ನೌಕರರ ಪ್ರೊ.ಫಂ. ವಂತಿಗೆ | 7,20,863.00 |
| 9,09,432.00 | ನೌಕರರ ಗ್ರ್ಯಾಚುಟಿ ಫಂಡ್ ವಂತಿಗೆ | 2,43,200.00 |
| 2,24,755.00 | ಸಿಬ್ಬಂದಿಗಳ ಗಳಿಕೆ ರಜೆ ನಗಧೀಕರಣ ಅನುವು ಹಾನಿಗೆ | 4,75,872.00 |
| 15,44,478.00 | ಗುತ್ತಿಗೆ ಸಿಬ್ಬಂದಿ ವೇತನ | 5,93,179.00 |
| 1,02,000.00 | ಭದ್ರತಾ ಸಿಬ್ಬಂದಿ ವೇತನ | 1,11,000.00 |
| 1,35,000.00 | ಸಹಕಾರಿ ತರಬೇತಿ ಅಭ್ಯರ್ಥಿಗಳ ಸ್ಟೈಫಂಡ್ | 1,66,518.00 |
| 13,506.00 | ನೌಕರರ ಪ್ರವಾಸ ವ ಇತರೆ ಭತ್ಯೆಗಳು | 56,083.00 |
| 43,945.00 | ಇಎಸ್ಐ ವಂತಿಗೆ(ಸಂಘ) | 17,331.00 |
| 2,16,000.00 | ಆಂತರಿಕ ಲೆಕ್ಕ ಪರಿಶೋಧನಾ ಶುಲ್ಕ | 90,000.00 |
| 10,69,186.00 | ಜನರಲ್ ಮೀಟಿಂಗ್ ಖರ್ಚು | 4,80,229.00 |
| 89,569.00 | ಸನ್ಮಾನ ಸಮಾರಂಭ ಖರ್ಚು | 52,975.00 |
| 25,72,635.00 | ಕಟ್ಟಡ ಸವಕಳಿ | 23,15,879.00 |
| 7,25,612.00 | ಡೆಡ್‌ಸ್ಟಾಕ ಸವಕಳಿ | 7,15,308.00 |
| 2,64,166.00 | ಲೆಕ್ಕ ಪರಿಶೋಧನೆ ಶುಲ್ಕ | 3,00,000.00 |
| 5,00,000.00 | ಕೃಷಿ ಪತ್ತಿನ ಸ್ಥಿರೀಕರಣ ನಿಧಿಗೆ ವರ್ಗಾಯಿಸಿದ್ದು | 5,00,000.00 |
| -- | ಚುನಾವಣಾ ವೆಚ್ಚ | 28,281.00 |
| -- | ಗುತ್ತಿಗೆ ಸಿಬ್ಬಂದಿ ಪಿ.ಎಫ್. ವಂತಿಗೆ | 20,520.00 |
| 49.00 | ರಾಜ್ಯ\ಕೇಂದ್ರ ಸರಕಾರದ ಬಡ್ಡಿ ರಿಯಾಯಿತಿ ಹಾನಿಗೆ ಹಾಕಿದ್ದು | 44,394.00 |
| 2,98,59,063.00 | ರಾ.ಸ.ಕ್ಲೇಮ ಆದಲ್ಲಿ ಕೆಡಿಸಿಸಿಗೆ ಕೊಡತಕ್ಕದ್ದು (ಹಾನಿಗೆ) | 1,60,73,834.00 |
| 61,07,835.00 | ಕೆ.ಸ.ಕ್ಲೇಮ ಆದಲ್ಲಿ ಕೆಡಿಸಿಸಿಗೆ ಕೊಡತಕ್ಕದ್ದು (ಹಾನಿಗೆ) | 95,18,898.00 |
| 1,80,000.00 | ಅಧ್ಯಕ್ಷರ ಗೌರವ ಧನ | 1,80,000.00 |
| 1,84,016.00 | ಕಛೇರಿ ಕೆಲಸದ ಡಾಟಾ ಎಂಟ್ರಿ | 58,500.00 |
| -- | ಸಂಜೀವಿನಿ ನಿಧಿಗೆ ವರ್ಗಾಯಿಸಿದ್ದು | 5,00,000.00 |
| 1,56,194.00 | ಜಿ.ಎಸ್.ಟಿ | 2,25,052.00 |
| -- | ಕಟ್ಟಡ ನಿಧಿಗೆ ವರ್ಗಾಯಿಸಿದ ರಖಂ | 10,00,000.00 |
| 16,054.00 | ಇ.ಡಿ.ಎಲ್.ಆಯ್ ವಂತಿಗೆ (ಸಂಘ) | 15,041.00 |
| 3,650.00 | ಸಭಾಬವನ ನಿರ್ವಹಣಾ ವೆಚ್ಚ | 2,379.00 |
| -- | ಆದಾಯ ಕರ | 5,95,063.00 |
| 11,481.00 | ಬಡ್ಡಿ ರಿಯಾಯತಿ | -- |
| 2,000.00 | ವೃತ್ತಿ ಕರ(ಆಫೀಸ್) | -- |
| 19,950.00 | ಕಟ್ಟಡದ ರಿಪೇರಿ ವ ಬಣ್ಣದ ಖರ್ಚು | -- |
| 1,06,594.00 | ತೆರಿಗೆ ವ ಇತರ ಶುಲ್ಕ ಪಾವತಿ | -- |
| 53,643.00 | ಡೆಡ್‌ಸ್ಟಾಕ್ ಮೊಟಕುಗೊಳಿಸಿದ ರಖಂ | -- |
| 26,597.00 | ಸಭೆ ಸಮಾರಂಭ ಖರ್ಚು | -- |
| 86,19,897.34 | ನಿಕ್ಕಿ ಲಾಭ | 1,19,64,608.30 |
| **9,89,93,146.68** | **ಅಂತೂ** | **9,99,64,950.77** |

ಲೆಕ್ಕಿಗ                ಮುಖ್ಯ ಕಾರ್ಯನಿರ್ವಾಹಕ

## ಲಾಭ-ಹಾನಿ ಪತ್ರಿಕೆ

| ಸನ್ 2021-2022 ರ ರಖಂ ರೂ. ಪೈಸೆ | ಲಾಭದ ವಿವರ | ಸನ್ 2022-2023 ರ ರಖಂ ರೂ. ಪೈಸೆ |
|---|---|---|
| 7,94,34,892.00 | ಸಾಲಗಳ ಮೇಲಿನ ಬಡ್ಡಿ | 8,28,27,370.00 |
| 1,63,58,569.11 | ಗುಂತಾವಣೆಗಳ ಮೇಲಿನ ಬಡ್ಡಿ | 1,27,71,966.00 |
| 6,62,571.00 | ಚಾಲತಿ ಹಾಗೂ ಸೇವಿಂಗ್ಸ್ ಠೇವುಗಳ ಮೇಲಿನ ಬಡ್ಡಿ | 8,44,327.00 |
| 2,108.00 | ದಂಡದ ಬಡ್ಡಿ | 199.00 |
| 6,01,014.57 | ಇತರೆ ಆದಾಯ | 7,14,185.77 |
| 18,950.00 | ಪ್ರವೇಶ ಫೀ | 21,750.00 |
| 27,300.00 | ನಾಮಮಾತ್ರ ಸದಸ್ಯತ್ವ ಶುಲ್ಕ | 30,300.00 |
| 40,000.00 | ಟಿ.ಎಸ್.ಎಸ್& ಕೆ.ಡಿ.ಸಿ.ಸಿ ಬಹುಮಾನ | 30,000.00 |
| 12,07,335.00 | ಸೇಲ್ಸ್ /ಖರೀಧಿ ರಿಬೇಟ್ | 17,17,553.00 |
| 5,94,604.00 | ಕರಾರುಪತ್ರ ಶುಲ್ಕ | 8,39,710.00 |
| 6,500.00 | ನಾಮಮಾತ್ರ ಸದಸ್ಯತ್ವ ನವೀಕರಣ ಶುಲ್ಕ | 3,600.00 |
| 36,803.00 | ಸಭಾಬವನ ಬಾಡಿಗೆ | 95,600.00 |
| -- | ಬರತಕ್ಕ ಆದಾಯ ಕರದ ಮೇಲಿನ ಬಡ್ಡಿ | 68,390.00 |
| 2,500.00 | ಡೆಡ್‌ಸ್ಟಾಕ್ ವಿಲೇವಾರಿ ರಖಮು | -- |
| **9,89,93,146.68** | **ಅಂತೂ** | **9,99,64,950.77** |

ಆಡಳಿತ ಮಂಡಳಿ ನಿರ್ದೇಶಕರು ಉಪಾಧ್ಯಕ್ಷರು ಅಧ್ಯಕ್ಷರು

# ದಿ ತೋಟಗಾರ್ಸ್ ರೂರಲ್ ಕೋ-ಆಪರೇಟಿವ್

## ದಿನಾಂಕ: 31-03-2023ಕ್ಕೆ ಇದ್ದಂತೆ

| ಕಳೆದ ವರ್ಷದ್ದು ದಿ. 31-3-2022ಕ್ಕೆ ರೂ. ಪೈಸೆ | ರೂ. ಪೈಸೆ | ಭಂಡವಲು ಮತ್ತು ಜವಾಬ್ದಾರಿಗಳು | ಚಾಲೂ ವರ್ಷದ್ದು ದಿ: 31-03-2023ಕ್ಕೆ ರೂ. ಪೈಸೆ | ರೂ. ಪೈಸೆ |
|---|---|---|---|---|
| **10,00,00,000.00** | | **ಅಧಿಕೃತ ಶೇರು ಭಂಡವಾಳ** | | **10,00,00,000.00** |
| **7,70,40,200.00** | | **ಶೇರು ಬಂಡವಾಳ** | | **8,94,09,500.00** |
| | 7,69,90,200.00 | **'ಅ' ವರ್ಗದ ಶೇರು ಭಂಡವಾಳ** | 8,90,83,200.00 | |
| | 50,000.00 | **'ಬ' ವರ್ಗದ ಶೇರು ಭಂಡವಾಳ** | 61,800.00 | |
| | | **ಸ್ಥಗಿತಗೊಂಡ ಶೇರು ಬಂಡವಾಳ** | 2,64,500.00 | |
| | | **ನಿಧಿಗಳು** | | |
| **2,63,28,156.36** | | **ಕಾಯ್ದಿಟ್ಟ ನಿಧಿ** | | **2,84,83,464.70** |
| **9,23,84,760.41** | | **ಇತರ ನಿಧಿಗಳು** | | **9,94,19,437.41** |
| | 2,42,41,719.70 | ಕಟ್ಟಡ ನಿಧಿ | 2,61,02,847.70 | |
| | 1,71,41,250.00 | ಕೃಷಿ ಪತ್ತಿನ ಸ್ಥಿರೀಕರಣ ನಿಧಿ | 1,76,41,250.00 | |
| | 3,88,745.00 | ತೋಟಗಾರರ ಕಲ್ಯಾಣ ನಿಧಿ | 2,20,324.00 | |
| | 85,53,283.00 | ಕಟ್ಟಡ ಸವಕಳಿ ನಿಧಿ | 1,08,69,162.00 | |
| | 43,56,386.71 | ಡೆಡ್ ಸ್ಟಾಕ ಸವಕಳಿ ನಿಧಿ | 50,71,694.71 | |
| | 1,00,430.00 | ಡಿವಿಡೆಂಡ್ ಸರಿಪಡಿಸುವ ನಿಧಿ | 1,00,430.00 | |
| | 5,48,617.00 | ಧರ್ಮಾರ್ಥ ನಿಧಿ | 31,600.00 | |
| | 1,10,19,265.00 | ಸಂಜೀವಿನಿ ನಿಧಿ | 1,33,57,065.00 | |
| | 7,96,117.00 | ಶತಮಾನೋತ್ಸವ ನಿಧಿ | 7,96,117.00 | |
| | 6,22,457.00 | ಪ್ರಚಾರ ನಿಧಿ | 6,22,457.00 | |
| | 13,39,524.00 | ಸಿಬ್ಬಂದಿ ಕಲ್ಯಾಣ ನಿಧಿ | 13,29,524.00 | |
| | 39,81,276.00 | ಬುಡತಿ ಸಾಲದ ನಿಧಿ | 39,81,276.00 | |
| | 1,92,95,690.00 | ಭಂಡವಾಳ ಕ್ರೋಢಿಕೃತ ನಿಧಿ | 1,92,95,690.00 | |
| **26,20,307.00** | | **ಸಿಬ್ಬಂದಿ ಗ್ರ್ಯಾಚುಟಿ ನಿಧಿ** | | **28,63,507.00** |
| | | **ನೌಕರರ ಪ್ರೊವಿಡೆಂಟ್ ಫಂಡ್/ಅನುವು** | | |
| **13,67,812.00** | | ಸಿಬ್ಬಂದಿಗಳ ಗಳಿಕೆ ರಜೆ ನಗಧೀಕರಣ ಅನುವು | | **18,43,684.00** |
| **28,19,83,481.00** | | **ಹೊರಗಿನಿಂದ ಪಡೆದ ಸಾಲಗಳು** | | **23,20,51,878.84** |
| | 28,19,83,402.00 | ಕೆ.ಡಿ.ಸಿ.ಸಿ. ಬ್ಯಾಂಕ್ ಕೆ.ಸಿ.ಸಿ. ಸಾಲ (ಚಿ.ಹಿ.) | 20,00,00,000.00 | |
| | -- | ಟಿ.ಎಸ್.ಎಸ್.ಶಿರಸಿ ಆಸಾಮಿ ಖಾತೆ | 3,20,51,878.84 | |
| | 54.00 | ಕೆ.ಡಿ.ಸಿ.ಸಿ. ಬ್ಯಾಂಕ್ ಮಾಧ್ಯಮಿಕ ಸಾಲ (ಚಿ.ಹಿ) | -- | |
